ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrar@bcu.ac.in

ಸಂ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ–ಸಿಂಡಿಕೇಟ್/986 /2024–25 ದಿನಾಂಕ: 20.11.2024

ಗೆ,
ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು–560001

ಮಾನ್ಯರೆ,

ವಿಷಯ: ದಿನಾಂಕ: 13.11.2024 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

****

ದಿನಾಂಕ: 13.11.2024 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

*ಕುಲಸಚಿವರು*

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ವಿಶೇಷ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬೆಂ.ನ.ವಿ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯ BENGALURU CITY UNIVERSITY
Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrar@bcu.ac.in

ಸಂಖ್ಯೆ:ಬಿಸಿಯು/ಎಸ್‌ವೈಎನ್/ಅಸಾಮಾನ್ಯ-ಸಿಂಡಿಕೇಟ್/986 /2024-25 ದಿನಾಂಕ: 19.11.2024

ದಿನಾಂಕ 13.11.2024 ರಂದು ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು – 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡವಳಿಗಳು.

**ಸಭೆಯಲ್ಲಿ ಉಪಸ್ಥಿತರಿದ್ದ ಸದಸ್ಯರು:**

| | | |
|---|---|---|
| 1. | ಪ್ರೊ. ಲಿಂಗರಾಜ ಗಾಂಧಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ. ಜ್ಯೋತಿ ವೆಂಕಟೇಶ್ | ಸದಸ್ಯರು |
| 3. | ಶ್ರೀ ಎಂ. ವಿ. ರಂಗಪ್ಪ | ಸದಸ್ಯರು |
| 4. | ಶ್ರೀ. ಸಮರ್ಥ ಮುನಿರಾಜು | ಸದಸ್ಯರು |
| 5. | ಡಾ. ಸುಮಯಾ ಫಾತೀಮಾ | ಸದಸ್ಯರು |
| 6. | ಡಾ. ಎಂ. ಆರ್. ಲಕ್ಷ್ಮೀನಾರಾಯಣ | ಸದಸ್ಯರು |
| 7. | ಡಾ. ಎಲಿಝಾಬೆತ್ ಜಾಸ್ಮಿನ್ | ಸದಸ್ಯರು |
| 8. | ಶ್ರೀಮತಿ. ಡಿ. ಆರ್. ಸುಧಾ | ಸದಸ್ಯರು |
| 9. | ಶ್ರೀಮತಿ ಆಯೇಷಾ ಫರ್ಜಾನಾ | ಸದಸ್ಯರು |
| 10. | ಡಾ. ಹೆಚ್. ಕೃಷ್ಣರಾಮ್, | ಸದಸ್ಯರು |
| 11. | ಶ್ರೀ ವಿ. ಶಿವಕುಮಾರ್, | ಸದಸ್ಯರು |
| 12. | ಶ್ರೀ ಕೆ.ಪಿ. ಪಾಟೀಲ್ | ಸದಸ್ಯರು |
| 13. | ಶೀಮತಿ. ಶಿಲ್ಪಶ್ರೀ. ವಿ.ಎನ್ | ಸದಸ್ಯರು |
| 14. | ಡಾ. ಆನಂದ ಕುಮಾರ್ ಸಿ. ಎಸ್<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 15. | ಶ್ರೀ ಜವರೇಗೌಡ ಟಿ, ಕೆ.ಎ.ಎಸ್<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಂಡ ಮಾನ್ಯ ಕುಲಪತಿಗಳಿಗೆ ಹಾಗೂ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರುಗಳಿಗೆ ಕುಲಸಚಿವರು ಸ್ವಾಗತಿಸಿ, ಪ್ರಸ್ತಾವಿಕವಾಗಿ ಮಾತನಾಡಿ ಸಭೆಗೆ ಚಾಲನೆ ನೀಡಲು ಮಾನ್ಯ ಕುಲಪತಿಗಳಿಗೆ ವಿನಂತಿಸಿದರು.

ಮಾನ್ಯ ಕುಲಪತಿಗಳು ಎಲ್ಲ ಸದಸ್ಯರನ್ನು ಮತ್ತೊಮ್ಮೆ ಸ್ವಾಗತಿಸಿ, ದಿನಾಂಕ 18.09.2024 ರಿಂದ ವಿಶ್ವವಿದ್ಯಾಲಯದಲ್ಲಿ ಜರುಗಿದ ವಿವಿಧ ಚಟುವಟಿಕೆಗಳ ಕುರಿತು ಕೆಳಗಿನ ಮಾಹಿತಿಯನ್ನು ಸಭೆಗೆ ನೀಡಿದರು.

1. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 28(1)(f) ರಡಿಯಲ್ಲಿ ಸಿಂಡಿಕೇಟ್ ಪ್ರಾಧಿಕಾರಕ್ಕೆ ನಾಮನಿರ್ದೇಶಿತರಾದ ಡಾ. ಪ್ರೇಮಾ, ಪ್ರಾಂಶುಪಾಲರು, ಸೇಂಟ್ ಥೆರೆಸಾ ಮಹಿಳಾ ಮಹಾವಿದ್ಯಾಲಯ ಹಾಗೂ ಡಾ. ಪಂಕಜ್ ಚೌಧರಿ, ಪ್ರಾಂಶುಪಾಲರು, ಬಿ.ಎಂ.ಎಸ್. ಸಂಜೆ

ಮಹಾವಿದ್ಯಾಲಯ ಇವರ ಒಂದು ವರ್ಷದ ಅವಧಿ ದಿನಾಂಕ: 02.11.2024 ರಂದು ಮುಕ್ತಾಯಗೊಂಡಿದ್ದು, ವಿಶ್ವವಿದ್ಯಾನಿಲಯಕ್ಕೆ ಅವರು ಸಲ್ಲಿಸಿದ ಸೇವೆಯನ್ನು ಸ್ಮರಿಸಿ ದಾಖಲಿಸಲಾಗವುದು.

2. ಮೇಲಿನ ಇಬ್ಬರು ಪ್ರಾಂಶುಪಾಲರ ಸ್ಥಾನದಲ್ಲಿ, ಡಾ. ಎಲಿಝಾಬೆತ್ ಜಾಸ್ಮಿನ್, ಪ್ರಾಂಶುಪಾಲರು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈಕಾಲಜಿ ಮತ್ತು ರಿಸರ್ಚ ಹಾಗೂ ಶ್ರೀಮತಿ ಡಿ.ಆರ್. ಸುಧಾ, ಪ್ರಾಂಶುಪಾಲರು, ವಿಜಯ ಕಾಲೇಜು, ಇವರನ್ನು ಸಿಂಡಿಕೇಟ್ ಸದಸ್ಯರಾಗಿ ನಾಮನಿರ್ದೇಶನ ಮಾಡಲಾಗಿದ್ದು, ಅವರನ್ನು ಈ ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

3. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 28(1)(g) ರಡಿಯಲ್ಲಿ ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಇಲಾಖೆಯಿಂದ ನಾಮನಿರ್ದೇಶಿತರಾಗಿ ಇಂದಿನ ಸಭೆಯಲ್ಲಿ ಉಪಸ್ಥಿತರಿರುವ ಶ್ರೀ ವಿ. ಶಿವಕುಮಾರ, ನ್ಯಾಯವಾದಿಗಳು, ಬೆಂಗಳೂರು ಹಾಗೂ ಶ್ರೀಮತಿ ಆಯೇಷಾ ಫರ್ಜಾನಾ, ಮಂಗಳೂರು ಅವರುಗಳನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

4. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಪ್ರಕರಣ 28(1)(e)ರಡಿಯಲ್ಲಿ ಕರ್ನಾಟಕ ರಾಜ್ಯದ ಗೌರವಾನ್ವಿತ ರಾಜ್ಯಪಾಲರು ಹಾಗೂ ವಿಶ್ವವಿದ್ಯಾಲಯದ ಕುಲಾಧಿಪತಿಗಳು ನಾಮನಿರ್ದೇಶನ ಮಾಡಿದ್ದ ಶ್ರೀ ಎಂ. ವಿ. ರಂಗಪ್ಪ ಹಾಗೂ ಶ್ರೀ ಸಮರ್ಥ ಮುನಿರಾಜುರವರ ಮೂರು ವರ್ಷಗಳ ಅವಧಿ ದಿನಾಂಕ 29.11.2024 ಮುಕ್ತಾಯಗೊಳ್ಳಲಿದ್ದು, ಅವರ ಸ್ಥಾನದಲ್ಲಿ ಸನ್ಮಾನ್ಯ ಕುಲಾಧಿಪತಿಗಳು ಡಾ. ಬಿ. ಆರ್. ಸುಪ್ರೀತ್ ಮತ್ತು ಶ್ರೀಮತಿ ಚೈತ್ರ ಟಿ. ಎಂ ರವರನ್ನು ದಿನಾಂಕ 29.11.2024 ರಿಂದ ಮೂರು ವರ್ಷಗಳ ಅವಧಿಗೆ ನಾಮನಿರ್ದೇಶನ ಮಾಡಿರುತ್ತಾರೆ.

5. ದಿನಾಂಕ: 19.09.2024 ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ 24ನೇ ಸಾಮಾನ್ಯ ಸಭೆಯಲ್ಲಿ ಭಾಗವಹಿಸಲಾಯಿತು.

6. ದಿನಾಂಕ: 26.09.2024 ರಂದು ಮಹಾವಿದ್ಯಾಲಯಗಳ ದೈಹಿಕ ಶಿಕ್ಷಣ ನಿರ್ದೇಶಕರ ಸಭೆ ಜರುಗಿ 2024-25ನೇ ಸಾಲಿನ ಕ್ರೀಡಾ ಚಟುವಟಿಕೆ ಹಾಗೂ ವಿವಿಧ ಕ್ರೀಡೆಗಳಲ್ಲಿ ಪ್ರಥಮ, ದ್ವಿತಿಯ ಸ್ಥಾನ ಗಳಿಸಿದ ಕ್ರೀಡಾ ಪಟುಗಳಿಗೆ ನಗದು ಬಹುಮಾನ ನೀಡುವ ಸಮಾರಂಭ ಜರುಗಿತು.

7. ದಿನಾಂಕ: 27.09.2024 ರಂದು ಕರ್ನಾಟಕ ವಿಧಾನ ಮಂಡಳದ ಸಭೆಯ ಮುಂದಿಡಲಾದ ಕಾಗದ ಪತ್ರಗಳ ಸಮಿತಿಯ ಸಭೆ ವಿಧಾನ ಸೌಧದಲ್ಲಿ ಜರುಗಿತು. ಕುಲಸಚಿವರು ಮತ್ತು ವಿತ್ತಾಧಿಕಾರಿಗಳೊಂದಿಗೆ ಸಭೆಯಲ್ಲಿ ಭಾಗವಹಿಸಲಾಯಿತು.

8. ದಿನಾಂಕ: 01.10.2024 ರಂದು ಎನ್.ಎಸ್.ಎಸ್ ವತಿಯಿಂದ ರಕ್ತದಾನ ಶಿಬಿರ ಜರುಗಿತು. ಅದೇ ದಿವಸ ವೊಲ್ವರ್‌ಹ್ಯಾಂಪ್ಟನ್ ವಿಶ್ವವಿದ್ಯಾನಿಲಯದ ತಜ್ಞರ ನಿಯೋಗ ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡಿ ಸಂಶೋಧನೆ ಹಾಗೂ ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸುತ್ತಿರುವ Wolverhampton – Bengaluru Centre (WBC) for Research and Innovation ಕೇಂದ್ರದ ರೂಪುರೇಷೆಗಳ ಕುರಿತು ವಿಶ್ವವಿದ್ಯಾನಿಲಯದ ಡೀನರು ಹಾಗೂ ಪ್ರಾಧ್ಯಾಪಕರೊಂದಿಗೆ ಸಮಾಲೋಚನೆ ನಡೆಸಿದರು.

9. ದಿನಾಂಕ: 02.10.2024 ಗಾಂಧಿ ಜಯಂತಿಯನ್ನು ಆಚರಿಸಲಾಯಿತು.

10. ದಿನಾಂಕ: 14.10.1024 ರಿಂದ 22.10.2024 ರವರೆಗೆ ಅತಿಥಿ ಉಪನ್ಯಾಸಕರ ಆಯ್ಕೆ ಸಮಿತಿಯ ಸಭೆಗಳನ್ನು ಜರುಗಿಸಿ ಅವುಗಳ ಶಿಫಾರಸ್ಸಿನಂತೆ ಅರ್ಹ ಅತಿಥಿ ಉಪನ್ಯಾಸಕರ ನೇಮಕಾತಿ ಆದೇಶ ಹೊರಡಿಸಲಾಗಿದೆ.

11. ದಿನಾಂಕ: 23.10.2024ರಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಲ್ಲಿ ಜರುಗಿದ ಬ್ರಿಟಿಷ್ ಕೌನ್ಸಿಲ್ ಪ್ರಾಯೋಜಿತ Capacity Building Programme for International Officers of the Universities ಕುರಿತ ಆನ್‌ಲೈನ್ ಸಭೆಯಲ್ಲಿ ಭಾಗವಹಿಸಲಾಯಿತು.

12. ದಿನಾಂಕ: 01.11.2024 ರಂದು ಕನ್ನಡ ರಾಜ್ಯೋತ್ಸವವನ್ನು ಆಚರಿಸಲಾಯಿತು.

13. ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮತ್ತು ಬ್ರಿಟಿಷ್ ಕೌನ್ಸಿಲ್ ಸಹಭಾಗಿತ್ವದಲ್ಲಿ ರೂಪಿಸಲಾದ (SCOUT)-Scholars for Outstanding Undergraduate Talent ಕಾರ್ಯಕ್ರಮದ ಅಡಿಯಲ್ಲಿ ಎರಡು ವಾರಗಳ ಶೈಕ್ಷಣಿಕ ಪ್ರವಾಸಕ್ಕಾಗಿ ಆಯ್ಕೆಯಾದ ಕೆಳಕಂಡ ಐದು ಸ್ನಾತಕ ವಿದ್ಯಾರ್ಥಿಗಳಿಗೆ ಹಾಗೂ ಅವರೊಂದಿಗೆ ಪ್ರಯಾಣ ಮಾಡುತ್ತಿರುವ ವಾಣಿಜ್ಯ ನಿಕಾಯ ಡೀನರು ಹಾಗೂ SCOUT ನೋಡಲ್ ಅಧಿಕಾರಿ ಡಾ. ಕೆ. ಆರ್. ಜಲಜಾರವರನ್ನು ದಿನಾಂಕ: 06.11.2024 ರಂದು ಸನ್ಮಾನಿಸಿ ಶುಭ ಪ್ರಯಾಣವನ್ನು ಕೋರಲಾಯಿತು.

    i. ಕುಮಾರಿ. ರಾಧಿಕ ಎಲ್. ಜಾದವ್
    ii. ಕುಮಾರಿ. ಆನಂದ ಲಕ್ಷ್ಮೀ
    iii. ಕುಮಾರಿ. ಕುಲೂದ್ ಎಸ್. ಅಹಮದ್
    iv. ಶ್ರೀ. ನಿತಿನ್ ಕುಮಾರ್ ಎನ್. ಕೆ
    v. ಕುಮಾರಿ. ಹರ್ಷಿತ ಕೆ. ಎಂ

    ಅದೇ ದಿವಸ ಜಾಗತಿಕ ಭಾಷೆಗಳ ವಿಭಾಗ ಫ್ರೆಂಚ್ ಭಾಷಾ ಶಿಕ್ಷಕರಿಗಾಗಿ ಆಯೋಜಿಸಲಾದ ಓರಿಯಂಟೇಶನ್ ಕಾರ್ಯಕ್ರಮ ಉದ್ಘಾಟನೆಯನ್ನು ನೆರವೇರಿಸಲಾಯಿತು.

14. ದಿನಾಂಕ: 06.11.2024 ರಂದು ಮಧ್ಯಾಹ್ನ 3.00 ಗಂಟೆಗೆ ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿ ಸಭೆಯನ್ನು ಜರುಗಿಸಿ 2023–24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಿಗೆ ಅನುಮೋದನೆ ಪಡೆಯಲಾಯಿತು.

15. ದಿನಾಂಕ: 08.11.2024 ರಂದು (SCOUT)-Scholars for Outstanding Undergraduate Talent) ಕಾರ್ಯಕ್ರಮದ ಅಡಿಯಲ್ಲಿ ಯು.ಕೆ. ದೇಶದ ಯುನಿವರ್ಸಿಟಿ ಆಫ್ ಈಸ್ಟ್‌ಲಂಡನ್ ವಿಶ್ವವಿದ್ಯಾನಿಲಯಕ್ಕೆ 2 ವಾರಗಳ ಶೈಕ್ಷಣಿಕ ಪ್ರವಾಸಕ್ಕೆ ರಾಜ್ಯದ ಆಯ್ದ ಆರು ವಿಶ್ವವಿದ್ಯಾನಿಲಯಗಳಿಂದ ಆಯ್ಕೆಯಾದ 30 ಸ್ನಾತಕ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಸನ್ಮಾನಿಸುವ ಕಾರ್ಯಕ್ರಮವನ್ನು ವಿಧಾನ ಸೌಧದಲ್ಲಿ ಆಯೋಜಿಸಲಾಗಿತ್ತು. ರಾಜ್ಯದ ಉನ್ನತ ಶಿಕ್ಷಣ ಸಚಿವರಾದ ಸನ್ಮಾನ್ಯ ಡಾ. ಎಂ.ಸಿ. ಸುಧಾಕರರವರು ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಶುಭ ಪ್ರಯಾಣ ಕೋರಿ ಅಭಿನಂದಿಸಿದರು.

16. 09.11.2024 ಹಾಗೂ 10.11.2024 ರಂದು ವಿಜಯ ಕರ್ನಾಟಕ ದಿನ ಪತ್ರಿಕೆಯ ಸಹಯೋಗದೊಂದಿಗೆ "ವಿ.ಕೆ. ಕನ್ನಡ ಹಬ್ಬ" ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಲಾಗಿತ್ತು. ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಫ್ಯಾಶನ್ ಶೋ, ನೃತ್ಯ ಕಾರ್ಯಕ್ರಮಗಳನ್ನು ಒಳಗೊಂಡಂತೆ ಹಲವಾರು ಸಾಂಸ್ಕೃತಿಕ ಹಾಗೂ ಕ್ರಿಯಾತ್ಮಕ ಚಟುವಟಿಕೆಗಳು ಜರುಗಿದವು. ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳ, ಅಧ್ಯಾಪಕರು, ಅಧ್ಯಾಪಕೇತರ ಸಿಬ್ಬಂದಿಗಳ ಹಾಗೂ ಅವರ ಕುಟುಂಬ ವರ್ಗದವರು ಕೂಡ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

17. ದಿನಾಂಕ 11.11.2024ರಂದು ವಿದ್ಯಾವಿಷಯಕ ಪರಿಷತ್ ಸಭೆ ಜರುಗಿತು.

ಮೇಲಿನ ವರದಿಯನ್ನು ಮಂಡಿಸಿದ ನಂತರ ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ಕಾರ್ಯಸೂಚಿಯನ್ನು ಮಂಡಿಸಲು ತಿಳಿಸಿದರು.

ಅದರಂತೆ ಕುಲಸಚಿವರು ಕಾರ್ಯಸೂಚಿಯನ್ನು ಸಭೆಯಲ್ಲಿ ಮಂಡಿಸಿದರು.

**ವಿಷಯ ಸಂಖ್ಯೆ: 01**

ವಿಷಯ: 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ವಿಶ್ವವಿದ್ಯಾನಿಲಯದ ಆಂತರಿಕ ಲೆಕ್ಕ ಪರಿಶೋಧಕರಾದ, ಮೆ: Chella S & Associates, No. 56/1, 13th Cross, Malleshwaram, Bengaluru ರವರು ಸಿದ್ಧಪಡಿಸಿ ಸಲ್ಲಿಸಿದ್ದು, ಅವುಗಳ ಪರಿಶೀಲನೆ ಹಾಗೂ ಅನುಮೋದನೆ ಕುರಿತು

***ಪರಾಮರ್ಶಕ ಟಿಪ್ಪಣಿ:***

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ-2000ರ ಪ್ರಕರಣ 47(1) ರ ಪ್ರಕಾರ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಸಿಂಡಿಕೇಟ್ ನಿರ್ದೇಶನದಂತೆ ಸಿದ್ಧಪಡಿಸಬೇಕಾಗಿದ್ದು, ಅದರಂತೆ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಆಂತರಿಕ ಲೆಕ್ಕ ಪರಿಶೋಧಕರಾದ, ಮೆ: Chella S & Associates, No. 56/1, 13th Cross, Malleshwaram, Bengaluru ರವರು ಸಿದ್ಧಪಡಿಸಿ ಸಲ್ಲಿಸಿರುತ್ತಾರೆ. ಮೇಲೆ ನಮೂದಿಸಿದ ಅಧಿನಿಯಮದ ಪ್ರಕರಣ 32(2) ರ ಪ್ರಕಾರ 2022-23 ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ದಿನಾಂಕ 6.11.2024 ರಂದು ಜರುಗಿದ ಹಣಕಾಸು ಸಮಿತಿ ಹಾಗೂ ದಿನಾಂಕ. 11.11.2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ ಸಭೆಗಳಲ್ಲಿ ಮಂಡಿಸಲಾಗಿದ್ದು, ಸದರಿ ಪ್ರಾಧಿಕಾರಗಳ ಶಿಫಾರಸ್ಸುಗಳನ್ನು ಸಭೆಯಲ್ಲಿ ಒದಗಿಸಲಾಯಿತು.

2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ 2000ರ ಅನುಚ್ಛೇದ 47(2) ಪ್ರಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿವರಣೆ:**

ಸಭೆಯಲ್ಲಿ ಉಪಸ್ಥಿತರಿದ್ದ ವಿತ್ತಾಧಿಕಾರಿಗಳು 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಪ್ರಮುಖ ಅಂಶಗಳನ್ನು ವಿವರಿಸಿ, ಸದರಿ ಲೆಕ್ಕಪತ್ರಗಳನ್ನು ದಿನಾಂಕ 6.11.2024 ರಂದು ಜರುಗಿದ ಹಣಕಾಸು ಸಮಿತಿ ಮತ್ತು ದಿನಾಂಕ 11.11.2024 ರಂದು ಜರುಗಿದ ವಿದ್ಯಾವಿಷಯಕ ಪರಿಷತ್ತು ಸಭೆಗಳು ಅನುಮೋದನೆ ನೀಡಿರುತ್ತವೆ. ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸಿರುವುದು ಮತ್ತು ಅದರ ನಿರ್ವಹಣೆ ಬಗ್ಗೆ ಹಣಕಾಸು ಸಮಿತಿ ಪ್ರಶಂಸೆ ವ್ಯಕ್ತಪಡಿಸಿದೆ ಎಂದು ಹೇಳಿದರು. ಹಣಕಾಸು ಸಮಿತಿ ಸೂಚಿಸಿದ ತಿದ್ದುಪಡಿಯನ್ನು ವಾರ್ಷಿಕ ಲೆಕ್ಕ ಪತ್ರದಲ್ಲಿ ಅಳವಡಿಸಿಕೊಳ್ಳಲಾಗುವುದು ಎಂದು ತಿಳಿಸಿದರು.

ಸದಸ್ಯರಾದ ಡಾ. ಹೆಚ್. ಕೃಷ್ಣರಾಮ್ ಹಾಗೂ ಶ್ರೀ ಕೆ. ಪಿ. ಪಾಟೀಲ್‌ರವರು 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ಮೇಲೆ ಹಣಕಾಸು ಸಮಿತಿ ಮತ್ತು ವಿದ್ಯಾವಿಷಯಕ ಪರಿಷತ್ತುಗಳು ಮಾಡಿರುವ ಶಿಫಾರಸ್ಸುಗಳನ್ನು ಕಾರ್ಯಕಲಾಪಗಳ ನಿಯಮಾವಳಿಗಳ ಪ್ರಕಾರ 7 ದಿವಸ ಮೊದಲು ಸದಸ್ಯರಿಗೆ ಒದಗಿಸದೆ ಇಂದು ಸಭೆಯಲ್ಲಿ ಮಂಡಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದರು. ಇದಲ್ಲದೆ ವಾರ್ಷಿಕ ಲೆಕ್ಕ ಪತ್ರಗಳನ್ನು ಚಾರ್ಟರ್ಡ್ ಅಕೌಂಟೆಂಟ್ ರವರಿಂದ ಸಿದ್ಧಪಡಿಸಲು ಅವಕಾಶ ನೀಡುವ ದಾಖಲೆಗಳನ್ನು ಒದಗಿಸುವಂತೆ

ತಿಳಿಸಿದರು. ವಿತ್ತಾಧಿಕಾರಿಗಳು ಈ ಕುರಿತು ವಿವರಣೆ ನೀಡಿ, 2023-24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರದ ವರದಿಯನ್ನು ಎಲ್ಲ ಸದಸ್ಯರಿಗೆ ಪೂವಾಭಾವಿ ಕಾರ್ಯಸೂಚಿಯೊಂದಿಗೆ ಕಳುಹಿಸಲಾಗಿದೆ. ಹಣಕಾಸು ಸಮಿತಿ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಗಳ ನಡವಳಿಗಳ ಉಧೃತ ಭಾಗಗಳನ್ನು ಮಾತ್ರ ಇಂದು ಸಭೆ ಪ್ರಾರಂಭವಾಗುವ ಪೂರ್ವದಲ್ಲಿ ಸದಸ್ಯರಿಗೆ ಒದಗಿಸಲಾಗಿದೆ ಎಂದು ಹೇಳಿದರು. 2018-19ನೇ ಹಣಕಾಸು ವರ್ಷದಿಂದ ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕ ಪತ್ರಗಳನ್ನು ಚಾರ್ಟರ್ಡ ಅಕೌಂಟೆಂಟ್‌ರಿಂದ ಸಿದ್ಧಪಡಿಸಲಾಗುತ್ತಿದೆ. ಸಿಂಡಿಕೇಟ್ ಸಭೆಯ ಅನುಮೋದನೆ ಪಡೆದು ಚಾರ್ಟರ್ಡ ಅಕೌಂಟೆಂಟ್‌ರವರ ಸೇವೆಯನ್ನು ಬಳಸಿಕೊಂಡು ವಾರ್ಷಿಕ ಲೆಕ್ಕಪತ್ರಗಳನ್ನು ಸಿದ್ಧಪಡಿಸುವ ಈ ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬರಲಾಗಿದೆ. ರಾಜ್ಯದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ಈ ವ್ಯವಸ್ಥೆ ಜಾರಿಯಲ್ಲಿದೆ ಎಂದು ಹೇಳಿದರು. ಸದಸ್ಯರಾದ ಡಾ. ಹೆಚ್. ಕೃಷ್ಣರಾಮ್, ರವರು ಸಿಂಡಿಕೇಟ್ ಅನುಮೋದನೆ ನೀಡಿದ ಪ್ರತಿ ತಮಗೆ ಒದಗಿಸುವಂತೆ ತಿಳಿಸಿದರು. ಅದೇ ಸಂದರ್ಭದಲ್ಲಿ ಡಾ. ಹೆಚ್. ಶ್ರೀ ಕೃಷ್ಣರಾಮ್ ರವರು ಸಭೆಯ ಪೂರ್ವದಲ್ಲಿ ಸಿದ್ಧಪಡಿಸಿದ ಪತ್ರಕ್ಕೆ ಶ್ರೀ ವಿ. ಶಿವಕುಮಾರ್, ಶ್ರೀ ಕೆ.ಪಿ. ಪಾಟೀಲ್ ಮತ್ತು ಶ್ರೀಮತಿ ಶಿಲ್ಪಶ್ರೀ ಅವರ ಸಹಿ ಪಡೆದು ಕಾರ್ಯಸೂಚಿಯ ವಿಷಯ ಸಂಖ್ಯೆ: 1 ಕುರಿತಂತೆ ಆಕ್ಷೇಪಣೆ ವ್ಯಕ್ತಪಡಿಸುವ ಪತ್ರವನ್ನು ಸದಸ್ಯ ಕಾರ್ಯದರ್ಶಿಗಳಾದ ಕುಲಸಚಿವರಿಗೆ ನೀಡಿದರು. ಸದಸ್ಯ ಕಾರ್ಯದರ್ಶಿಗಳು ಸದರಿ ಪತ್ರವನ್ನು ಸಭೆಯಲ್ಲಿ ವಾಚಿಸಿದರು.

ಮಾನ್ಯ ಕುಲಪತಿಗಳು, ಈ ಕುರಿತು ವಿವರಣೆ ನೀಡಿ, ವಿಶ್ವವಿದ್ಯಾನಿಲಯ 2018-19, 2019-20, 2020-21, 2021-22, 2022-23ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಚಾರ್ಟರ್ಡ ಅಕೌಂಟೆಂಟ್ ಮೂಲಕ ಸಿದ್ಧಪಡಿಸಿದ್ದು, ಅವುಗಳನ್ನು ಹಣಕಾಸು ಸಮಿತಿ, ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಗಳು ಅನುಮೋದಿಸಿ, ಸರ್ಕಾರ ಮತ್ತು ರಾಜ್ಯ ಲೆಕ್ಕ ಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆಗೆ ಸಲ್ಲಿಸಲಾಗಿದೆ. ಹೀಗೆ ಸಲ್ಲಿಸಲಾದ ವಾರ್ಷಿಕ ಲೆಕ್ಕ ಪತ್ರಗಳ ಆಧಾರದ ಮೇಲೆ ಆಯಾಯ ವರ್ಷಗಳ ಲೆಕ್ಕ ಪತ್ರಗಳನ್ನು ಕರ್ನಾಟಕ ರಾಜ್ಯ ಲೆಕ್ಕ ಪತ್ರ ಮತ್ತು ಲೆಕ್ಕಪರಿಶೋಧನಾ ಇಲಾಖೆಯ ತಂಡ ಲೆಕ್ಕ ಪರಿಶೋಧನೆ ನಡೆಸಿ, ವರದಿಗಳನ್ನು ಸಲ್ಲಿಸಿದ್ದು, ಸದರಿ ಲೆಕ್ಕಪರಿಶೋಧನಾ ವರದಿಯ ಪ್ರತಿಯೊಂದು ಖಂಡಿಕೆಗಳಿಗೆ ಅನುಪಾಲನಾ ವರದಿಗಳನ್ನು ಸಿದ್ಧಪಡಿಸಿ, ಅವುಗಳನ್ನೂ ಸಹ ಪುನ: ಹಣಕಾಸು ಸಮಿತಿ, ವಿದ್ಯಾವಿಷಯಕ ಪರಿಷತ್ ಮತ್ತು ಸಿಂಡಿಕೇಟ್ ಸಭೆಗಳಲ್ಲಿ ಮಂಡಿಸಿ, ಅನುಮೋದನೆ ಪಡೆದು ಸರ್ಕಾರದ ಮುಖಾಂತರ ಶಾಸಕಾಂಗದ ಎರಡು ಸಭೆಗಳಲ್ಲಿ ಮಂಡಿಸಲು ಸಲ್ಲಿಸುವುದು. ಪ್ರತಿ ವರ್ಷ ನಿಯಮಿತವಾಗಿ ನಡೆದುಕೊಂಡು ಬರುತ್ತಿರುವ ಪ್ರಕ್ರಿಯೆ ಎಂದು ತಿಳಿಸಿದರು.

ಮಾನ್ಯ ಸದಸ್ಯರು ಸಲ್ಲಿಸಿದ ಆಕ್ಷೇಪಣಾ ಪತ್ರದ ಒಕ್ಕಣಿಕೆ ಕುರಿತಂತೆ ವಿವರಣೆ ನೀಡಿ, ವಾರ್ಷಿಕ ಲೆಕ್ಕ ಪತ್ರ ಮತ್ತು ವಾರ್ಷಿಕ ಲೆಕ್ಕ ಪರಿಶೋಧನಾ ವರದಿಗಳ ಕುರಿತಂತೆ ಮಾನ್ಯ ಸದಸ್ಯರಿಗೆ ತಪ್ಪು ಗ್ರಹಿಕೆಯಾಗಿರುವಂತೆ ಕಂಡು ಬರುತ್ತದೆ. ಇಂದಿನ ಸಭೆಯಲ್ಲಿ ಮಂಡಿಸಿರುವುದು 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರ (Annual Accounts) ಆಗಿದ್ದು, ಇದು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ-2000 ರಲ್ಲಿರುವ ಪ್ರಕರಣ 47(1) ಮತ್ತು 47(2)ಗಳಿಗೆ ಪೂರಕವಾಗಿದೆ. ಪ್ರಕರಣ 47(3) ಮತ್ತು 47(4)ಗಳು ವಾರ್ಷಿಕ ಲೆಕ್ಕಪತ್ರಗಳ ಪರಿಶೋಧನಾ ವರದಿ (Audit Report) ಗಳಿಗೆ ಸಂಬಂಧಪಟ್ಟಿರುತ್ತವೆ. ಪ್ರಸ್ತುತ ಮಂಡಿಸಿರುವ 2023-24ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳಿಗೆ ಸಿಂಡಿಕೇಟ್ ಸಭೆ ಅನುಮೋದನೆ ನೀಡಿದ ನಂತರ ಕರ್ನಾಟಕ ರಾಜ್ಯ ಲೆಕ್ಕ ಪತ್ರ ಮತ್ತು ಲೆಕ್ಕ ಪರಿಶೋಧನಾ ಇಲಾಖೆಗೆ ಸಲ್ಲಿಸಲಾಗುವುದು. ಆ ನಂತರ ಅವರು ಲೆಕ್ಕಪತ್ರಗಳ ಪರಿಶೋಧನೆ (Audit) ಮಾಡಲು ಕ್ರಮ ವಹಿಸುತ್ತಾರೆ. ಅವರು ಸಲ್ಲಿಸುವ ಲೆಕ್ಕ ಪರಿಶೋಧನಾ ವರದಿ (Audit Report) ಮತ್ತು ಅವುಗಳಿಗೆ ಅನುಪಾಲನಾ ವರದಿಯನ್ನು (Compliance Report) ಪುನ: ಹಣಕಾಸು ಸಮಿತಿ, ವಿದ್ಯಾವಿಷಯಕ ಪರಿಷತ್ತು ಮತ್ತು ಸಿಂಡಿಕೇಟ್ ಸಭೆಗಳಲ್ಲಿ ಮಂಡಿಸಲಾಗುವುದು. ತದನಂತರ ನಿಗದಿತ ಸಂಖ್ಯೆಯ ಪ್ರತಿಗಳನ್ನು

ಶಾಸಕಾಂಗದ ಎರಡೂ ಸಭೆಗಳಲ್ಲಿ ಮಂಡಿಸಲು ಸರ್ಕಾರಕ್ಕೆ ಸಲ್ಲಿಸಲಾಗುವುದು. ಇದು ಅಧಿನಿಯಮದ ಪ್ರಕಾರ ನಿರ್ವಹಿಸಬೇಕಾದ ಕರ್ತವ್ಯ ಎಂದು ತಿಳಿಸಿದರು.

ನಾಲ್ಕು ಜನ ಸಿಂಡಿಕೇಟ್ ಸದಸ್ಯರು ಸಲ್ಲಿಸಿರುವ ಪತ್ರದ ಖಂಡಿಕೆ 1(a) ನಲ್ಲಿ ನಮೂದಿಸಿರುವ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ ಪ್ರಕರಣ 47(3) ರ ಅಡಿಯಲ್ಲಿ ಲೆಕ್ಕ ಪತ್ರಗಳನ್ನು ಕರ್ನಾಟಕ ಲೆಕ್ಕ ಪತ್ರ ಮತ್ತು ಪರಿಶೋಧನಾ ಇಲಾಖೆ ಲೆಕ್ಕ ಪರಿಶೋಧನಾ ಮಾಡುವ ಪ್ರಮೇಯ ಸಧ್ಯಕ್ಕೆ ಉದ್ಭವಿಸುವುದಿಲ್ಲ. ಪ್ರಸ್ತುತ ಮಂಡಿಸಿರುವ 2023–24ನೇ ಸಾಲಿನ ಲೆಕ್ಕ ಪತ್ರಗಳನ್ನು ಸಿಂಡಿಕೇಟ್ ಸಭೆ ಅನುಮೋದಿಸಿದ ನಂತರ ಅದನ್ನು ರಾಜ್ಯ ಲೆಕ್ಕ ಪತ್ರ ಮತ್ತು ಲೆಕ್ಕ ಪರಿಶೋಧನಾ ಇಲಾಖೆಗೆ ಸಲ್ಲಿಸಿದ ಮೇಲೆ ಅವರು ಲೆಕ್ಕ ಪರಿಶೋಧನೆ ನಡೆಸಿ ವರದಿ ಸಲ್ಲಿಸದ ನಂತರ ಉದ್ಭವವಾಗುತ್ತದೆ.

ಸದಸ್ಯರು ಪತ್ರದಲ್ಲಿ ತಿಳಿಸಿದಂತೆ 2022–23ನೇ ಹಾಗೂ 2023–24ನೇ ಸಾಲಿನ ಲೆಕ್ಕ ಪತ್ರಗಳನ್ನು ಈ ಸಭೆಯ ಪರಿಶೀಲನೆಗೆ ಮಂಡಿಸಿರುವುದಿಲ್ಲ. 2023–24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ಮಾತ್ರ ಅನುಮೋದನೆಗೆ ಮಂಡಿಸಲಾಗಿದೆ. 31.3.2023 ರವರೆಗೆ ಆಗಿರುವ 2022–23ನೇ ಸಾಲಿನ ಸ್ವೀಕೃತಿ ಹಾಗೂ ವೆಚ್ಚದ ವಿವರಗಳನ್ನು ತುಲನಾತ್ಮಕ ಪರಿಶೀಲನೆಗಾಗಿ 2023–24ರ ವಾರ್ಷಿಕ ಲೆಕ್ಕ ಪತ್ರದಲ್ಲಿ ನೀಡಲಾಗಿರುತ್ತದೆ. ಇದು ವಾರ್ಷಿಕ ಲೆಕ್ಕ ಪತ್ರಗಳನ್ನು ಸಿದ್ದಪಡಿಸುವ ವಿಧಾನವಾಗಿರುತ್ತದೆ. ಈಗಾಗಲೇ ತಿಳಿಸಿದಂತೆ 2022–23ರ ವರೆಗಿನ ಹಣಕಾಸು ವರ್ಷದ ವಾರ್ಷಿಕ ಲೆಕ್ಕ ಪತ್ರ (Annual Accounts) ಮತ್ತು ವಾರ್ಷಿಕ ಲೆಕ್ಕ ಪರಿಶೋಧನಾ ವರದಿ ಹಾಗೂ ಅನುಪಾಲನಾ ವರದಿ (Annual Audit Report & Compliance Report) ಗಳನ್ನು ಈಗಾಗಲೇ ಸಿಂಡಿಕೇಟ್ ಒಳಗೊಂಡಂತೆ ಪ್ರಾಧಿಕಾರಗಳ ಅನುಮೋದನೆ ಪಡೆಯಲಾಗಿದೆ ಎಂಬ ಅಂಶ ಸ್ಪಷ್ಟೀಕರಿಸಿದರು.

ಪತ್ರದ ಖಂಡಿಕೆ 1(b) ನಲ್ಲಿ ಮಾನ್ಯ ಸದಸ್ಯರು ಪುನಃ ಲೆಕ್ಕ ಪರಿಶೋಧನೆ ಕುರಿತು ಪ್ರಸ್ತಾಪಿಸಿದ್ದು, ಈಗಾಗಲೇ ವಿವರಿಸಿದಂತೆ, ಪ್ರಸ್ತುತ ಸಭೆಯ ಪರಿಶೀಲನೆಗೆ ಮಂಡಿಸಿರುವ ವಿಷಯ 2023–24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳ ವರದಿ, ಲೆಕ್ಕ ಪರಿಶೋಧನಾ ವರದಿ ಅಲ್ಲ ಈ ಲೆಕ್ಕ ಪತ್ರಗಳನ್ನು ರಾಜ್ಯ ಲೆಕ್ಕ ಪತ್ರ ಮತ್ತು ಲೆಕ್ಕ ಪರಿಶೋಧನಾ ಇಲಾಖೆಗೆ ಸಲ್ಲಿಸಿದ ನಂತರ ಅವರ ಲೆಕ್ಕ ಪತ್ರಗಳ ಪರಿಶೀಲನೆಗೆ ಕ್ರಮವಹಿಸುತ್ತಾರೆ. ಮಾನ್ಯ ಸದಸ್ಯರು ತಿಳಿಸಿದಂತೆ ಖಾಸಗಿ ಲೆಕ್ಕ ಪರಿಶೋಧಕರಿಂದ ಲೆಕ್ಕ ಪರಿಶೋಧನೆ ಮಾಡಿಸಿರುವುದಿಲ್ಲ. ಕೇವಲ ವಾರ್ಷಿಕ ಲೆಕ್ಕ ಪತ್ರಗಳನ್ನು ಮಾತ್ರ ಸಿದ್ಧಪಡಿಸಲಾಗಿದೆ. ಇದು ಲೆಕ್ಕ ಪರಿಶೋಧನೆ ವರದಿ ಅಲ್ಲ. ಹಾಗಾಗಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮ –2000 ಪ್ರಕರಣ 47ರ ಉಲ್ಲಂಘನೆಯ ಪ್ರಶ್ನೆ ಉದ್ಭವಿಸುವುದಿಲ್ಲ.

ಪತ್ರದ ಖಂಡಿಕೆ (2) ಕುರಿತಂತೆ ತಿಳಿಸುವುದೇನಂದರೆ ಕರ್ನಾಟಕ ವಿಶ್ವವಿದ್ಯಾಲಯಗಳ ಅಧಿನಿಯಮ 32(3)(ii) ರಲ್ಲಿ ಹಣಕಾಸು ಸಮಿತಿ ನಿರ್ವಹಿಸಬೇಕಾದ ಕರ್ತವ್ಯಗಳಲ್ಲಿ ವಾರ್ಷಿಕ ಆಯವ್ಯಯ ಅಂದಾಜು (Annual Budget) ಗಳ ಪರಿಶೀಲನೆಗೆ ಸಂಬಂಧಿಸಿರುತ್ತದೆ. ವಾರ್ಷಿಕ ಲೆಕ್ಕ ಪತ್ರಗಳಿಗೆ (Annual Accounts) ಗಳಿಗೆ ಸಂಬಂಧಪಡುವದಿಲ್ಲ.

ಅದೇ ಖಂಡಿಕೆಯಲ್ಲಿ ಪ್ರಸ್ತಾಪಿಸಿರುವ Statute Governing Rules of Business of the Syndicate ಕುರಿತಂತೆ ತಿಳಿಸುವುದೇನೆಂದರೆ ಬೆಂಗಳೂರು ವಿಶ್ವವಿದ್ಯಾನಿಲಯದ ಪರಿನಿಯಮಗಳನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ತಿದ್ದುಪಡಿ ಅಧಿನಿಯಮ 2015ರ ಪ್ರಕಾರ ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಅಳವಡಿಸಿಕೊಂಡಿದ್ದು, ಸದರಿ ಪರಿನಿಯಮಗಳನ್ನು ಕ್ರ.ಸಂ. 5.3ರಲ್ಲಿ ಪೂರ್ವಭಾವಿ ಕಾರ್ಯಸೂಚಿಯನ್ನು (Preliminary Agenda of Business) ಸಭೆ ಜರುಗುವ ದಿನಾಂಕದಿಂದ 7 ದಿವಸ ಮುಂಚಿತವಾಗಿ ಸದಸ್ಯರಿಗೆ ಕಳುಹಿಸಲು ಸೂಚಿಸಲಾಗಿದೆ. ಅದೇ ಪರಿನಿಯಮಾವಳಿಯ 5.7ರಲ್ಲಿ ಪೂರ್ವಭಾವಿ ಕಾರ್ಯಸೂಚಿ

(Preliminary Agenda) ಹೊರಡಿಸಿದ ನಂತರ ಪೂರಕ ಕಾರ್ಯಸೂಚಿ (Supplementary Agenda) ಮತ್ತು ತುರ್ತಾದ ವಿಷಯಗಳನ್ನು ಸಭೆ ಪ್ರಾರಂಭವಾಗುವುದಕ್ಕೆ ಮುಂಚೆ ನೀಡಲು ಅವಕಾಶ ನೀಡುತ್ತದೆ.

ಕಾರಣ ಮಾನ್ಯ ಸದಸ್ಯರು ತಮ್ಮ ಪತ್ರದಲ್ಲಿ ಸೂಚಿಸಿದಂತೆ ಹಣಕಾಸು ಸಮಿತಿಯ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಗಳ ಶಿಫಾರಸ್ಸುಗಳನ್ನು ಸಭೆ ಜರುಗುವ ಪೂರ್ವದಲ್ಲಿ ನೀಡಿರುವುದು ಪರಿನಿಯಮಗಳ ಪ್ರಕಾರ ಸರಿ ಇರುತ್ತದೆ. 4 ಜನ ಸದಸ್ಯರು ಸಹಿ ಮಾಡಿ ಸಲ್ಲಿಸಿದ ಪತ್ರ ತಪ್ಪು ಗೃಹಿಕೆಯಿಂದ ಕೂಡಿರುತ್ತದೆ. ಅಥವಾ ಪರಿನಿಯಮ / ಅಧಿನಿಯಮಗಳನ್ನು ತಪ್ಪಾಗಿ ಅರ್ಥೈಸಿಕೊಂಡು ನೀಡಿದ ಪತ್ರವಾಗಿದೆ. ಇದರಲ್ಲಿ ಯಾವುದೇ ನಿಯಮಗಳ ಉಲ್ಲಂಘನೆಯಾಗಿರುವುದಿಲ್ಲ.

ಪರಿನಿಯಮಾವಳಿಗಳಲ್ಲಿ ಸಿಂಡಿಕೇಟ್ ತೀರ್ಮಾನಗಳಿಗೆ ಅಸಮ್ಮತಿ ಸೂಚಿಸಲು ಅವಕಾಶವಿದ್ದು, ಕಾರ್ಯಸೂಚಿಗೆ ಅಥವಾ ಕಾರ್ಯಸೂಚಿಯ ವಿಷಯಗಳಿಗೆ ಆಕ್ಷೇಪಣೆ ಸಲ್ಲಿಸಲು ಅವಕಾಶವಿರುವುದಿಲ್ಲ.

ಪರಿನಿಯಮದ ಕ್ರ.ಸಂ. 5.16 ರ ಖಂಡಿಕೆ 2 ರಲ್ಲಿ "Any member who dissents from a decision of the Syndicate and expresses a desire to give a note of dissent may do so within two days after the day of the meeting. Such note shall always be brief and be confined to the main point at issue. Personal reference of any kind as also attributing of motives shall invariably be avoided" ಎಂದು ಇರುತ್ತದೆ. ಈ ಪರಿನಿಯಮದ ಪ್ರಕಾರ ಸಭೆಯಲ್ಲಿ ಉಪಸ್ಥಿತರಿದ್ದ ಯಾವುದೇ ಸದಸ್ಯ ಸಿಂಡಿಕೇಟ್ ಸಭೆ ತೆಗೆದುಕೊಂಡ ತೀರ್ಮಾನಕ್ಕೆ ತನ್ನ ಅಸಮ್ಮತಿ ಸೂಚಿಸಲು ಅವಕಾಶವಿದೆ. ಸಭೆಯಲ್ಲಿ ಅಸಮ್ಮತಿ ಸೂಚಿಸಿದ ಮುಂದಿನ 2 ದಿವಸಗಳಲ್ಲಿ ಅಸಮ್ಮತಿ ಪತ್ರ ಸಲ್ಲಿಸಬೇಕೆಂಬ ನಿಬಂಧನೆ ಇದೆ. ಈ ರೀತಿಯ ಅಸಮ್ಮತಿ ಪತ್ರಗಳನ್ನು ವೈಯಕ್ತಿಕವಾಗಿ ನೀಡಬೇಕಾಗುತ್ತದೆ. ಜಂಟಿಯಾಗಿ ಸಹಿಮಾಡಿದ ಅಸಮ್ಮತಿ ಪತ್ರಗಳನ್ನು ಪರಿಗಣಿಸಲು ನಿಯಮಗಳಲ್ಲಿ ಅವಕಾಶವಿಲ್ಲ.

ಚಾರ್ಟರ್ಡ್ ಅಕೌಂಟೆಂಟ್‌ರ ವರಿಂದ ಲೆಕ್ಕ ಪತ್ರಗಳನ್ನು ಸಿದ್ಧಪಡಿಸಿಕೊಳ್ಳಲು ಸಿಂಡಿಕೇಟ್ ಅನುಮೋದನೆಯ ಪ್ರತಿಯನ್ನು ಮಾನ್ಯ ಸದಸ್ಯರು ಕೋರಿದ್ದು, ವಿತ್ತಾಧಿಕಾರಿಗಳು ಅದನ್ನು ಒದಗಿಸುವುರೆಂದು ಸದಸ್ಯರಿಗೆ ತಿಳಿಸಲಾಯಿತು. ಪ್ರಸ್ತುತ ಮಂಡಿಸಿರುವ 2023-24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳನ್ನು ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಗೆ ತುರ್ತಾಗಿ ಸಲ್ಲಿಸಬೇಕಾಗಿರುವುದರಿಂದ 2023-24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಿಗೆ ಅನುಮೋದನೆ ನೀಡಲು ಮಾನ್ಯ ಕುಲಪತಿಗಳು ಕೋರಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಆಯೇಷಾ ಫರ್ಜಾನಾರವರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿ, ಸದಸ್ಯರು ಚರ್ಚೆಯಲ್ಲಿ ಭಾಗವಹಿಸುವಾಗ ಸಭೆಯ ಘನತೆ ಮತ್ತು ಗೌರವಗಳನ್ನು ಕಾಪಾಡಿಕೊಂಡು ಹೋಗಬೇಕು. ಶಾಂತಿ ಸಂಯಮದಿಂದ ನಿಲುವುಗಳನ್ನು ಮಂಡಿಸಬಹುದು ಹಾಗೂ ಸಮರ್ಥಿಸಬಹುದು. ಏರುಧ್ವನಿಯ ಚರ್ಚೆ ಸಭೆಯಲ್ಲಿ ಭಯದ ವಾತಾವರಣ ನಿರ್ಮಾಣ ಮಾಡುತ್ತದೆ. ಈ ಸಭೆಯಲ್ಲಿ 5 ಜನ ಮಹಿಳಾ ಸದಸ್ಯರು ಇದ್ದಾರೆ ಎಂಬುದನ್ನು ಮಾನ್ಯ ಸದಸ್ಯರು ಗಮನಿಸಬೇಕು. ಸನ್ಮಾನ್ಯ ಸದಸ್ಯರು ಸಭೆಯಲ್ಲಿ ಶಾಂತಚಿತ್ತದಿಂದ ಚರ್ಚೆಯಲ್ಲಿ ಭಾಗವಹಿಸಿ ಹಿತಕರವಾದ ವಾತಾವರಣ ಉಂಟು ಮಾಡಬೇಕೆಂದು ಕಳಕಳಿಯಿಂದ ವಿನಂತಿಸಿದರು.

***<u>ಸಿಂಡಿಕೇಟ್ ತೀರ್ಮಾನ:</u>***

**ಹಣಕಾಸು ಸಮಿತಿ ಮತ್ತು ವಿದ್ಯಾವಿಷಯಕ ಪರಿಷತ್ ಸಭೆಗಳು ಶಿಫಾರಸ್ಸು ಮಾಡಿರುವ 2023-24ನೇ ಸಾಲಿನ ವಾರ್ಷಿಕ ಲೆಕ್ಕ ಪತ್ರಗಳಿಗೆ ಸಿಂಡಿಕೇಟ್ ಸಭೆ ಬಹುಮತದಿಂದ ಅನುಮೋದನೆ ನೀಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 2**

ವಿಷಯ: ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ವಾರ್ಷಿಕ ವರದಿಯನ್ನು ಸಿಂಡಿಕೇಟ್ ಸಭೆಯ ಪರಿಶೀಲನೆ ಹಾಗೂ ಅನುಮೋದನೆಗೆ ಮಂಡಿಸುವ ಕುರಿತು.

***ಪರಾಮರ್ಶಕ ಟಿಪ್ಪಣಿ:***

ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಂದ ಸ್ವೀಕರಿಸಲಾದ ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಕ್ರೋಢೀಕರಿಸಿ, ಸಿದ್ಧಪಡಿಸಿರುವ 2023–24ನೇ ಸಾಲಿನ ವಾರ್ಷಿಕ ವರದಿಯನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 2000 ಅನುಚ್ಛೇದ 50(1)ರ ಪ್ರಕಾರ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿವರಣೆ:**

ಮಾನ್ಯ ಕುಲಪತಿಗಳು 2023–24ನೇ ಸಾಲಿನ ವಾರ್ಷಿಕ ವರದಿಯ ಸ್ಥೂಲವಾದ ರೂಪುರೇಷೆಗಳನ್ನು ಸಭೆಗೆ ವಿವರಿಸಿದರು. ಈ ವರದಿ ಸಂಬಂಧಿಸಿದ ವರ್ಷದಲ್ಲಿ ವಿಶ್ವವಿದ್ಯಾನಿಲಯ ನಡೆದು ಬಂದ ದಾರಿ ಹಾಗೂ ಸಾಧಿಸಬೇಕಾದ ಪ್ರಗತಿಯ ದಿಕ್ಸೂಚಿಯಾಗಿದೆ ಎಂದು ಹೇಳಿದರು. ಆಡಳಿತ, ಶೈಕ್ಷಣಿಕ, ಸಂಶೋಧನೆ, ಪರೀಕ್ಷೆ, ವಿದ್ಯಾರ್ಥಿ ಕಲ್ಯಾಣ, ಕ್ರೀಡೆ, ಸಂಪನ್ಮೂಲಗಳು, ವಿದ್ಯಾರ್ಥಿಗಳ ಪ್ರವೇಶ, ಪರೀಕ್ಷೆಗಳ ಫಲಿತಾಂಶ, ಅಭಿವೃದ್ಧಿ ಕೆಲಸಗಳು ಇತ್ಯಾದಿಗಳ ವಿವರಗಳನ್ನು ಈ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಈ ಎಲ್ಲ ರಂಗಗಳಲ್ಲಿ ವಿಶ್ವವಿದ್ಯಾನಿಲಯದ ಶಕ್ತಿ, ಸಾಮರ್ಥ್ಯ ಹಾಗೂ ಕೊರತೆಗಳ ವಿವರಗಳು ಈ ವರದಿಯಲ್ಲಿ ನೀಡಲಾಗಿದೆ. ಖಾಯಂ ಶಿಕ್ಷಕ / ಶಿಕ್ಷಕೇತರ ಸಿಬ್ಬಂದಿಗಳ ಕೊರತೆ ನ್ಯಾಕ್ (NAAC) ಮಾನ್ಯತೆಗಾಗಿ ಇರುವ ಪ್ರಮುಖ ಅಡ್ಡಿಯಾಗಿದೆ ಎಂದು ಸಭೆಗೆ ತಿಳಿಸಿದರು.

ಯು.ಯು.ಸಿ.ಎಂ.ಎಸ್ ಬಂದ ನಂತರ ವಿಶ್ವವಿದ್ಯಾನಿಲಯದ ಹಂತದಲ್ಲಿ ನಿರ್ವಹಿಸಬೇಕಾದ ಕೆಲಸಗಳಿಗೂ ಸಹ ಯು.ಯು.ಸಿ.ಎಂ.ಎಸ್ ನಿರ್ವಾಹಕರನ್ನು ಅವಲಂಬಿಸಬೇಕಾಗಿದೆ. ಕಾಲೇಜು/ ವಿದ್ಯಾರ್ಥಿಗಳು ಸಲ್ಲಿಸುವ ಶುಲ್ಕ ವರ್ಷಾಂತ್ಯಕ್ಕೆ ವಿಶ್ವವಿದ್ಯಾನಿಲಯಕ್ಕೆ ಖಾತೆಗೆ ಒಟ್ಟು ಮೊತ್ತ ರೂಪದಲ್ಲಿ ಜಮಾ ಆಗುತ್ತದೆ. ಸಂದಾಯವಾದ ಶುಲ್ಕಗಳ ವೈಯಕ್ತಿಕ ವಿವರಗಳ ಅನುಪಸ್ಥಿತಿಯಲ್ಲಿ ಲೆಕ್ಕ ಪತ್ರಗಳ ನಿರ್ವಹಣೆ ಕಷ್ಟವಾಗಿದೆ ಎಂದು ತಿಳಿಸಿದರು.

ವಿವಿಧ ಪ್ರಾಧಿಕಾರಗಳ ರಚನೆ, ಸ್ವರೂಪ ಹಾಗೂ ಆಯಾಯ ಕಾಲಘಟ್ಟದಲ್ಲಿ ಕರ್ತವ್ಯ ನಿರ್ವಹಿಸಿದ ಅಧಿಕಾರಿಗಳ ವಿವರ, ಸಂಶೋಧನಾ ಚಟುವಟಿಕೆಗಳ ವಿವರ ಅಂತರಾಷ್ಟ್ರೀಯ ವಿಶ್ವವಿದ್ಯಾಲಯಗಳೊಂದಿಗೆ ಮಾಡಿಕೊಂಡ ಒಡಂಬಡಿಕೆ, ಸಂಶೋಧನಾ ಲೇಖನೆಗಳ ಪ್ರಕಟಣೆ, ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಹೊರದೇಶದ ವಿಶ್ವವಿದ್ಯಾನಿಲಯಗಳಿಗೆ ಭೇಟಿ ಮುಂತಾದ ಶೈಕ್ಷಣಿಕ / ಸಂಶೋಧನೆಗಳ ವಿವರಗಳನ್ನು ವಾರ್ಷಿಕ ವರದಿ ಹೊಂದಿದೆ ಎಂದು ತಿಳಿಸಿದರು. ವಿಶ್ವವಿದ್ಯಾನಿಲಯದಲ್ಲಿ ಸ್ನಾತಕ ವ್ಯಾಸಂಗಗಳನ್ನು ಪ್ರಾರಂಭಿಸಿರುವುದರಿಂದ, ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಮಲ್ಲೇಶ್ವರಂನಲ್ಲಿ ಮಹಿಳಾ ವಿದ್ಯಾರ್ಥಿಗಳಿಗಾಗಿ ಪ್ರಾರಂಭಿಸಲಾದ ಮಹಾವಿದ್ಯಾಲಯದಲ್ಲಿ ಸಹ ವಿದ್ಯಾರ್ಥಿನಿಯರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚು ಆಗುತ್ತಿದ್ದು, ಮಹಾವಿದ್ಯಾಲಯ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ ಎಂದು ಹೇಳಿದರು.

ವಿಶ್ವವಿದ್ಯಾಲಯದ ಆವರಣದ ಕಟ್ಟಡಗಳ ಪುನರ್ ನಿರ್ಮಾಣ, ಕ್ಯಾಂಪಸ್ ಅಭಿವೃದ್ಧಿ, ಹೊಸ ಶೈಕ್ಷಣಿಕ ಕಟ್ಟಡ, ಕ್ರೀಡಾ ಸಂಕೀರ್ಣ, ಆಟದ ಮೈದಾನ, ಈಜುಕೊಳಗಳ ನಿರ್ಮಾಣದಿಂದಾಗಿ ವಿದ್ಯಾರ್ಥಿ ಸ್ನೇಹಿ

ಶೈಕ್ಷಣಿಕ ವಾತಾವರಣ ನಿರ್ಮಾಣವಾಗಿದೆ ಎಂದು ಹೇಳಿದರು. ಅನುಭವಿ ಸಿಬ್ಬಂದಿಗಳ ಕೊರತೆ ಹಾಗೂ ಹಲವಾರು ಸವಾಲುಗಳ ಮಧ್ಯ ಪ್ರಾಧಿಕಾರಗಳ ಸದಸ್ಯರ, ಅಧ್ಯಾಪಕರ ಸಿಬ್ಬಂದಿಗಳ ಸಹಕಾರ, ಸರ್ಕಾರ ಹಾಗೂ ಸಂಯೋಜಿತ ಕಾಲೇಜುಗಳ ಸಹಯೋಗದಿಂದಾಗಿ ವಿಶ್ವವಿದ್ಯಾನಿಲಯದ ಪ್ರಸ್ತುತ ಬೆಳವಣಿಗೆ ಇದು ಸಾಧ್ಯವಾಗಿದೆ ಎಂದು ಹೇಳಿ 2023–24ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆ ಅನುಮೋದಿಸಬೇಕೆಂದು ಕೋರಿದರು.

***ಸಿಂಡಿಕೇಟ್ ತೀರ್ಮಾನ:***

**ವಿದ್ಯಾವಿಷಯಕ ಪರಿಷತ್ ಶಿಫಾರಸ್ಸು ಮಾಡಿರುವ ವಿಶ್ವವಿದ್ಯಾನಿಲಯದ 2023–24ನೇ ಸಾಲಿನ ವಾರ್ಷಿಕ ವರದಿಗೆ ಒಪ್ಪಿಗೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 3**

Sub: SCOUT (Scholars for Outstanding Undergraduate Talent) programme - a Short Term Residential Academic visits to Higher Education Institutions of UK by the talented Undergraduate Students, designed and facilitated by the British Council initiated by the KSHEC.

***Reference Note:***

Recognising the importance of global exposure and learning opportunities, KSHEC has initiated various internalization programmes in the academic and research fields. These programmes aim to equip faculty and students with international competencies, promote research collaboration and enhance the overall quality of education in the State Universities.

As a part of the MoU between the KSHEC and British Council several action plans have been outlined for the academic yer 2024-25. A notable initiative in this direction is the SCOUT (Scholars for Outstanding Undergraduate Talent) programme - designed and facilitated by the British Council. The SCOUT programme offers certified a Short Term courses and Residential Academic Visits to the Higher Education Institutions of UK by the selected talented Undergraduate Students.

PROGRAMME DETAILS:

1. An exclusive opportunity to undergraduate students of Karnataka State Public Universities.
2. This initiative provides students with a chance to participate in a certified short-term course at a prestigious UK Higher Education Institution.
3. Aims to bridge educational gaps and offer unique learning experiences to academically talented students from diverse socio-educational backgrounds.
4. The programme has the flexibility of choosing and designing customized delivery model, subject themes and scale with clear objectives and outcomes for all parties involved.

PURPOSE OF THE PROGRAMME:

1. To provide exposure and skills to talented young student typically without means to access an international education by providing and widening access.

2. To give them an experience of UK education and to develop professional and academic skills
3. Impact local communities, educational institutions and workplace through the learning gained during the short term course.
4. To enable UK universities and State Government to collaborate in education.

ELIGIBILITY:

1. The agew must be above 18 years on the date of application for the project.
2. Must have a valid passport at the time of initiating VISA process
3. They should be in the top 1% of the board of examination of recognized board in Karnataka.
4. Must have secured admission to a regular course in a State University. It is not open to students from Private Institutions.
5. Should be enrolled and attending second year college in a state institutions at the time of application and travel to UK on the SCOUT programme
6. Students may be required to have a minimum basic English Language listening, speaking, reading and writing ILSRW) skills.
7. Any other additional criteria as proposed by the KSHEC and British Council.
8. Selection of Students shall be SC/ST-I, OBC-I, Minorities-I, General Category-I

ROLE OF THE UNIVERSITY:

1. Select 5 students based on the criteria provided by KSHEC
2. The University will cover the travel expenses for the selected number of students.
3. The University will ensure coordination between KSHEC and students throughout the entire programme.
4. The University must welcome students into campus life and encourage them to share their experiences and inspire future groups within 60 days of their return.
5. The University must support a press conference to announce the programme and homecoming event in coordination with KSHEC.

The KSHEC has invited expression of interest from the University to participate in the SCOUT programme on 7.5.2024. Accordingly, a letter expressing interest was sent on 13.5.2024 stating the interested will be selected as per the objective parameters and adhering to the standard eligibility criteria.

The University after following the eligibility criteria and parameters has selected five students – one each from SC/ST,OBC and Minority community and 2 students from General Merit. Prof. K.R. Jalaja, Dean of Commerce Faculty and Nodal Officer for SCOUT programme is deputed for mentoring the students.

As per the agreed terms, the travel expenses of five students and one teacher Rs. 4,74,861-00 (Four Lakh Seventy four thousand eight hundred sixty one only) has been paid by the University.

This is a unique opportunity extended to the Undergraduate students of the university providing an exposure to the students an experience of UK education and to develop professional and academic skills.

The matter is placed before the Syndicate for information and approval.

**ವಿವರಣೆ:**

ಈ ಕುರಿತು ಸಭೆಗೆ ಹೆಚ್ಚಿನ ವಿವರ ನೀಡಿದ ಮಾನ್ಯ ಕುಲಪತಿಗಳು, ವಿಶ್ವವಿದ್ಯಾಲಯದಲ್ಲಿ ಸ್ನಾತಕ ಕೋರ್ಸುಗಳು ಕಳೆದ 2 ವರ್ಷದಿಂದ ಆರಂಭವಾಗಿದ್ದು, ವಿಶ್ವವಿದ್ಯಾನಿಲಯ ಬಹಳ ಕ್ರೀಯಾಶೀಲವಾಗಿ ಅಂತರಾಷ್ಟ್ರೀಯ ಒಡಂಬಡಿಕೆಗಳನ್ನು ಅದರಲ್ಲೂ, ವಿಶೇಷವಾಗಿ ಬ್ರಿಟಿಷ್ ಕೌನ್ಸಿಲ್ ಜೊತೆಗೆ ಮಾಡಿಕೊಂಡ ಒಡಂಬಡಿಕೆಯಿಂದಾಗಿ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರಿಗೆ ಈ ಅವಕಾಶ ದೊರೆತಿರುತ್ತದೆ. ಈಗಾಗಲೇ ಬ್ರಿಟಿಷ್ ಕೌನ್ಸಿಲ್ ಪ್ರಾಯೋಜಕತ್ವದಲ್ಲಿ ಕೆಲವು ಯೋಜನೆಗಳು ಕಾರ್ಯರೂಪದಲ್ಲಿದ್ದು, ಇದಕ್ಕೆ ಕಾರಣರಾದ ಬ್ರಿಟಿಷ್ ಕೌನ್ಸಿಲ್, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಉನ್ನತ ಶಿಕ್ಷಣ ಇಲಾಖೆಗೆ ಧನ್ಯವಾದಗಳನ್ನು ತಿಳಿಸಿದರು.

ವಿದೇಶಕ್ಕೆ ಹೋಗವ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ನೋಡಲ್ ಅಧಿಕಾರಿಗಳಾದ ಪ್ರೊ. ಕೆ.ಆರ್. ಜಲಜಾ, ಡೀನರು ವಾಣಿಜ್ಯ ನಿಕಾಯ ಇವರಿಗೆ ಬೀಳ್ಕೊಡುಗೆ ಸಮಾರಂಭವನ್ನು ದಿನಾಂಕ. 06.11.2024 ರಂದು ಆಯೋಜಿಸಲಾಗಿತ್ತು ಎಂದು ತಿಳಿಸಿದರು.

ಇದೊಂದು ವಿನೂತನವಾದ ಕಾರ್ಯಕ್ರಮವಾಗಿದ್ದು, ವಿಶ್ವವಿದ್ಯಾನಿಲಯದ ಸ್ನಾತಕ ವಿದ್ಯಾರ್ಥಿಗಳು ಬೇರೆ ದೇಶಗಳ ವಿಶ್ವವಿದ್ಯಾನಿಲಯಗಳಿಗೆ ಭೇಟಿ ನೀಡಿ ಅಲ್ಲಿಯ ಕಲಿಕಾ ವ್ಯವಸ್ಥೆ ಹಾಗೂ ಪಠ್ಯಕ್ರಮಗಳ ಪರಿಚಯ ಮಾಡಿಕೊಳ್ಳುವುದರೊಂದಿಗೆ ವಿದ್ಯಾರ್ಥಿಗಳಿಗೆ ಅಂತರಾಷ್ಟ್ರೀಯ ಶಿಕ್ಷಣದ ವಿಧಾನಗಳನ್ನು ಅರಿತುಕೊಳ್ಳಲು ಸಾಧ್ಯವಾಗುತ್ತದೆ ಹಾಗೂ ವಿದ್ಯಾರ್ಥಿಗಳ ಆತ್ಮ ಸ್ಥೈರ್ಯ ಹೆಚ್ಚಿಸಲು ಸಹಕಾರಿಯಾಗಿದೆ ಎಂದು ತಿಳಿಸಿದರು.

***ಸಿಂಡಿಕೇಟ್ ತೀರ್ಮಾನ:***

**SCOUT (Scholars for Outstanding Undergraduate Talent) ಕಾರ್ಯಕ್ರಮದ ಅಡಿಯಲ್ಲಿ ವಿಶ್ವವಿದ್ಯಾನಿಲಯ ಕೆಳಕಂಡ 5 ಸ್ನಾತಕ ವಿದ್ಯಾರ್ಥಿಗಳನ್ನು, ವಾಣಿಜ್ಯ ವಿಭಾಗದ ಪ್ರಾಧ್ಯಾಪಕಾರದ ಪ್ರೊ. ಕೆ. ಆರ್. ಜಲಜಾ ಅವರೊಂದಿಗೆ ಯು.ಕೆ. ದೇಶದ ಯುನಿವರ್ಸಿಟಿ ಆಫ್ ಈಸ್ಟ್‌ಲಂಡನ್ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಪ್ರವಾಸಕ್ಕೆ ಅನುಮತಿ ನೀಡಲು ವಿಶ್ವವಿದ್ಯಾನಿಲಯ ಕೈಕೊಂಡ ಕ್ರಮಕ್ಕೆ ಅನುಮೋದನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**i. ಕುಮಾರಿ. ರಾಧಿಕ ಎಲ್. ಜಾದವ್**
**ii. ಕುಮಾರಿ. ಆನಂದ ಲಕ್ಷ್ಮೀ**
**iii. ಕುಮಾರಿ. ಕುಲೂದ್ ಎಸ್. ಅಹಮದ್**
**iv. ಶ್ರೀ. ನಿತಿನ್ ಕುಮಾರ್ ಎನ್. ಕೆ**
**v. ಕುಮಾರಿ. ಹರ್ಷಿತ ಕೆ. ಎಂ**

ವಿಷಯ ಸಂಖ್ಯೆ: 4

ವಿಷಯ: 2025–26ನೇ ಶೈಕ್ಷಣಿಕ ಸಾಲಿಗೆ ಸಂಯೋಜನೆ ನವೀಕರಣ ಹೊಸ ಕೋರ್ಸು/ವಿಷಯ/ಭಾಷೆಗಳ ಹಾಗೂ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಇತ್ಯಾದಿಗಳ ಅರ್ಜಿ ಸಲ್ಲಿಸಲು ಸಂಯೋಜನಾ ಶುಲ್ಕಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿರುವ ಕ್ರಮದ ಅನುಸಮರ್ಥನೆ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 212 ಯುನ್ಇ 2024, ದಿನಾಂಕ 04.10.2024.

2. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: ಬೆ.ನ.ವಿ/ ವಿ.ಸಿ.ವಿ/ ಸಂಯೋಜನೆ/ 2024–25 ದಿನಾಂಕ: 28.10.2024.

***ಪರಾಮರ್ಶಕ ಟಿಪ್ಪಣಿ:***

ಉಲ್ಲೇಖ (1)ರ ಸರ್ಕಾರ ಆದೇಶ ದಿನಾಂಕ: 04.10.2024ರಲ್ಲಿ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನಾ ವೇಳಾ ಪಟ್ಟಿಯನ್ನು ಕಡ್ಡಾಯವಾಗಿ ಜಾರಿಗೊಳಿಸಿ ಆದೇಶಿಸಿರುತ್ತಾರೆ. ಈ ಸಂಯೋಜನಾ ವೇಳಾಪಟ್ಟಿಯ ಪ್ರಕಾರ ವಿಶ್ವವಿದ್ಯಾನಿಲಯಗಳು ಸಂಯೋಜನಾ ಶುಲ್ಕಗಳನ್ನು ದಿನಾಂಕ: 25.10.2024 ರೊಳಗೆ UUCMS Portalನಲ್ಲಿ Mapping ಮಾಡಲು ನಿಗದಿಪಡಿಸಿರುತ್ತಾರೆ. ಅದರಂತೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ 13 ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ಒಟ್ಟು 220 ಕಾಲೇಜುಗಳಿಗೆ 2025–26ನೇ ಶೈಕ್ಷಣಿಕ ಸಾಲಿನ ಸ್ನಾತಕ ಮತ್ತು ಸ್ನಾತಕೋತ್ತರ ಪದವಿ ಹಾಗೂ ಬಿ.ಎಡ್, ಬಿ.ಪಿಎಡ್, ಎಂ.ಎಡ್, ಎಂ.ಪಿಎಡ್ ಕಾಲೇಜುಗಳ ಸಂಯೋಜನೆ ನವೀಕರಣ ಹೊಸ ಕಾಲೇಜುಗಳ ಸಂಯೋಜನೆ/ವಿಷಯ/ಭಾಷೆ ಹಾಗೂ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಇತ್ಯಾದಿಗಳಿಗೆ ಕಳೆದ ವರ್ಷ ನಿಗದಿಪಡಿಸಿರುವ ಸಂಯೋಜನಾ ಶುಲ್ಕದ ಮೇಲೆ ವಾಡಿಕೆಯಂತೆ ಪ್ರತಿ ವರ್ಷಶೇಕಡ 10%ರ ಪ್ರಮಾಣದಲ್ಲಿ ಶುಲ್ಕವನ್ನು ಹೆಚ್ಚಿಗೆ ಮಾಡಿ ಉಲ್ಲೇಖ (02)ರಂತೆ ಅಧಿಸೂಚನೆ ಹೊರಡಿಸಲಾಗಿದೆ.

ವಿಶ್ವವಿದ್ಯಾನಿಲಯ 2025–26ನೇ ಶೈಕ್ಷಣಿಕ ಸಾಲಿಗೆ ಸಂಯೋಜನಾ ನವೀಕರಣ/ ಹೊಸ ಸಂಯೋಜನೆ/ ಹೊಸ ಕೋರ್ಸು/ ವಿಷಯ/ ಕಾಲೇಜಿನ ಹೆಸರು ಬದಲಾವಣೆ/ ಸ್ಥಳಾಂತರ/ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಇತ್ಯಾದಿಗಳಿಗೆ ಸಂಯೋಜನಾ ಶುಲ್ಕಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿರುವ ಕ್ರಮದ ಅನುಸಮರ್ಥನೆಗಾಗಿ ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಿದೆ.

**ವಿವರಣೆ:**

ಸದಸ್ಯರಾದ ಶ್ರೀ ಎಂ. ವಿ. ರಂಗಪ್ಪ ನವರು, ವಿವಿಧ ವಿಷಯಗಳ/ಕೋರ್ಸು ಶುಲ್ಕಗಳನ್ನು ನಿಗದಿ ಪಡಿಸುವಾಗ ಹೆಚ್ಚಿನ ಬೇಡಿಕೆ ಇಲ್ಲದ ಕೋರ್ಸುಗಳಿಗೆ ಶುಲ್ಕ ಹೆಚ್ಚಳದ ಪ್ರಮಾಣವನ್ನು ಕಡಿಮೆ ಮಾಡಬೇಕೆಂದು ತಿಳಿಸಿದರು.

ಪ್ರಸ್ತುತ ವಿಷಯ ಸಂಯೋಜನೆಗೆ ಸಂಬಂಧಿಸಿದ್ದು ಅದಕ್ಕೆ ಅನುಸಮರ್ಥನೆ ನೀಡಬೇಕೆಂದು, ಸದಸ್ಯರ ಭಾವನೆಯನ್ನು ಕೋರ್ಸು ಶುಲ್ಕಗಳ ಹೆಚ್ಚಳದ ಸಂದರ್ಭದಲ್ಲಿ ಪರಿಗಣಿಸಲಾಗುವುದೆಂದು ಮಾನ್ಯ ಕುಲಪತಿಗಳು ತಿಳಿಸಿದರು.

*<u>ಸಿಂಡಿಕೇಟ್ ತೀರ್ಮಾನ:</u>*

**2025–26ನೇ ಶೈಕ್ಷಣಿಕ ಸಾಲಿಗೆ ಸಂಯೋಜನಾ ನವೀಕರಣ/ಹೊಸ ಕೋರ್ಸ್/ವಿಷಯ/ಭಾಷೆಗಳ ಹಾಗೂ ವಿದ್ಯಾರ್ಥಿ ಪ್ರಮಾಣ ಹೆಚ್ಚಳ ಇತ್ಯಾದಿಗಳಿಗೆ ಸಂಯೋಜನಾ ಶುಲ್ಕವನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 5**

Sub: Invitation to Prof. Lingaraja Gandhi, Vice-Chancellor, Bengaluru City University to visit the Wolverhampton University United Kingdom as a Visiting Research Scholar for the ongoing Project 'Sustainable Smart Cities.."

Ref: Letter of Prof. Subashini Suresh, Director of Postgraduate Research Programme, University of Wolverhampton-UK bearing number visiting Scholar Scheme/2024/003, dated: 21.10.2024

***<u>Reference Note</u>*:**

Prof. Subashini Suresh, Director of Postgraduate Research Programme, University of Wolverhampton, - United Kingdom has invited Prof. Lingaraja Gandhi, Vice-Chancellor, BCU to visit as a **'distinguished Visiting Scholar'** with a grant of €5000 GBP to meet all expenses of the visit including travel, subsistence and stay to share his expertise in the ongoing Research Project "Sustainable SMART Cities" from 18th to 22nd November, 2024 (excluding journey period).

Prof. Lingaraja Gandhi, Vice-Chancellor has been associated with the Research Project of "Sustainable Smart Cities with crises, lessons from a global epidemic." As a distinguished expert, Prof. Gandhi has visited the University of Wolverhampton for 5 days, from 17.07.2023 to 21.07.2023 and 25.03.2024 to 29.03.2024 to share his expertise and knowledge. A "Visiting Scholar's Report" containing the academic/Research activities undertaken during the visit was prepared and submitted to the Hon'ble Chancellor. The progress of the Research Project has culminated in the publication of Research Articles and Conference papers.

Now, Prof. Subashini Suresh, Director of Postgraduate Research Programme, University of Wolverhampton has invited our Vice-Chancellor, Prof. Lingaraja Gandhi to visit his University from 18.11.2024 to 22.11.2024 to offer his expertise and to discuss on setting up of a collaborative Research and Innovation Centre at BCU. As evidenced by the letter of invitation, all the expenditure of the visit will be borne by the host University by setting aside £5000 GBP which covers, air fare, accommodation, subsistence and local travel costs associated with the visit. As such there is no financial implication on the part of the Bengaluru City University or the State Government.

As per the procedure a proposal has been submitted to the Principal Secretary to Govt., Higher Education Dept., in the prescribed application format requesting to recommend and forward to the Hon'ble Governor & Chancellor to sanction OOD and to place the Senior most Dean of the University in the concurrent charge as the Vice-Chancellor during the period of OOD.

The matter is placed before the Syndicate for information and approval.

*ಸಿಂಡಿಕೇಟ್ ತೀರ್ಮಾನ:*

**ಪ್ರೊ. ಲಿಂಗರಾಜ ಗಾಂಧಿ ಕುಲಪತಿಗಳು ಬೆಂಗಳೂರು ನಗರ ವಿಶ್ವವಿದ್ಯಾನಿಲಯ ಇವರಿಗೆ ವೊಲ್ವರಹ್ಯಾಂಪ್ಟನ್ ವಿಶ್ವವಿದ್ಯಾನಿಲಯದ ಆಹ್ವಾನದ ಮೇರೆಗೆ ದಿನಾಂಕ. 18.11.2024 ರಿಂದ 22.11.2024ರ ವರೆಗೆ "Sustainable Smart Cities" ಸಂಶೋಧನಾ ಯೋಜನೆಯಲ್ಲಿ ಪಾಲ್ಗೊಳ್ಳಲು ಯು.ಕೆ. ದೇಶಕ್ಕೆ ಭೇಟಿ ನೀಡಲು ಸಭೆ ಅನುಮೋದನೆ ನೀಡಿತು.**

**ಅನ್ಯಕಾರ್ಯ ನಿಮಿತ್ಯ ರಜೆ(OOD) ಗಾಗಿ ಸರ್ಕಾರದ ಮುಖಾಂತರ ಮಾನ್ಯ ಕಲಾಧಿಪತಿಗಳ ಮಂಜೂರಾತಿ ಕೋರಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಅದು ನಿಗದಿತ ಸಮಯದಲ್ಲಿ ಬಾರದೆ ಹೋದರೆ, ಭೇಟಿಯನ್ನು ಮುಂದೂಡುವಂತೆ University of Wolverhampton ಸಂಶೋಧನಾ ನಿರ್ದೇಶಕರನ್ನು ವಿನಂತಿಸಲಾಗುವುದು ಎಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.**

**ವಿಷಯ ಸಂಖ್ಯೆ: 6**

ವಿಷಯ: ಡಾ. ಕೆ. ಆರ್. ಜಲಜಾ, ಮುಖ್ಯಸ್ಥರು, ವಾಣಿಜ್ಯ ವಿಭಾಗ ಮತ್ತು ವಾಣಿಜ್ಯ ವಿಭಾಗದ ಡೀನರು ಅವರು ಲಂಡನ್‌ನಲ್ಲಿ ನಡೆಯಲ್ಲಿರುವ Scholars for Outstanding Undergraduate Training Programme (SCOUT) ಕಾರ್ಯಕ್ರಮದಲ್ಲಿ 2024 ನವೆಂಬರ್ 09-23 ರವರೆಗೆ ಭಾಗವಹಿಸಲು ಅನುಮತಿಸುವ ಬಗ್ಗೆ

ಉಲ್ಲೇಖ:
1. ವಿಶ್ವವಿದ್ಯಾನಿಲಯದ ಅಧಿಸೂಚನೆ ಸಂಖ್ಯೆ: BCU/EST/SCOUT/N.O.A /2024-25/222 ದಿನಾಂಕ: 28.08.2024
2. ಡಾ. ಕೆ.ಆರ್. ಜಲಜಾ, ಮುಖ್ಯಸ್ಥರು, ವಾಣಿಜ್ಯ ವಿಭಾಗ ಮತ್ತು ವಾಣಿಜ್ಯ ವಿಭಾಗದ ಡೀನರು ರವರ ಮನವಿ ಪತ್ರ ದಿನಾಂಕ: 29.10.2024
3. ವಿಶ್ವವಿದ್ಯಾನಿಲಯದ ಕಛೇರಿ ಆದೇಶದ ಸಂಖ್ಯೆ: BCU/EST/OOD/SCOUT /UK/2024-25 dated: 05.11.2024.

*ಪರಮಾರ್ಶಕ ಟಿಪ್ಪಣಿ:*

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮತ್ತು ಬ್ರಿಟಿಷ್ ಕೌನ್ಸಿಲ್ ಸಹಯೋಗದೊಂದಿಗೆ ಮಾಡಿಕೊಂಡಿರುವ MoU ನೊಂದಿಗೆ ರಾಜ್ಯದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ, SCOUT ಕಾರ್ಯಕ್ರಮವನ್ನು ದಿನಾಂಕ: 09.11.2024 ರಿಂದ 23.11.2024 ರವರೆಗೆ ಲಂಡನ್‌ನಲ್ಲಿ ಆಯೋಜಿಸಲಾಗಿದೆ. ಸದರಿ ಕಾರ್ಯಕ್ರಮದಲ್ಲಿ ಉಲ್ಲೇಖ(1)ರ ವಿಶ್ವವಿದ್ಯಾನಿಲಯದಿಂದ ನೋಡಲ್ ಅಧಿಕಾರಿಗಳಾಗಿ ಡಾ. ಕೆ.ಆರ್.

ಜಲಜಾ, ವಾಣಿಜ್ಯ ವಿಭಾಗ ಮತ್ತು ವಾಣಿಜ್ಯ ವಿಭಾಗದ ಡೀನರು ಅವರನ್ನು ಲಂಡನ್‌ನಲ್ಲಿ ನಡೆಯಲಿರುವ Scholars for Outstanding Undergraduate Training Programme (SCOUT) ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿರುವ ಹಿನ್ನೆಲೆಯಲ್ಲಿ ದಿನಾಂಕ: 08.11.2024 ರಿಂದ 24.11.2024 ರವರೆಗೆ ಮತ್ತು ಪ್ರಯಾಣ ದಿನಗಳನ್ನು ಅನ್ಯಕಾರ್ಯ ನಿಮಿತ್ತ ಎಂದು ಪರಿಗಣಿಸುವಂತೆ ಮನವಿ ಪತ್ರವನ್ನು ಸಲ್ಲಿಸಿರುತ್ತಾರೆ.

ಯುಜಿಸಿ ನಿಯಮಾವಳಿ 2018, 8.1 i(a) ಪ್ರಕಾರ ಒಂದು ಶೈಕ್ಷಣಿಕ ವರ್ಷದಲ್ಲಿ 30 ದಿನಗಳಿಗೆ duty leave ಮಂಜೂರು ಮಾಡಲು ಅವಕಾಶವಿದ್ದು, ಡಾ. ಜಲಜಾ, ವಾಣಿಜ್ಯ ವಿಭಾಗ ಮತ್ತು ವಾಣಿಜ್ಯ ವಿಭಾಗದ ಡೀನರು ಅವರಿಗೆ ದಿನಾಂಕ: 08.11.2024 ರಿಂದ 24.11.2024 ರವರೆಗೆ ಲಂಡನ್‌ನಲ್ಲಿ ನಡೆಯುವ SCOUT ಕಾರ್ಯಕ್ರಮದಲ್ಲಿ ಭಾಗವಹಿಸಲು, ಪ್ರಯಾಣದ ದಿನಗಳನ್ನು ಸೇರಿ OOD ಮೇಲೆ ತೆರಳಲು ಉಲ್ಲೇಖ (3)ರಲ್ಲಿ ಅನುಮತಿ ನೀಡಲಾಗಿದೆ. ಸದರಿ ವಿಷಯವನ್ನು ಸಿಂಡಿಕೇಟ್‌ನ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

***<u>ಸಿಂಡಿಕೇಟ್ ತೀರ್ಮಾನ:</u>***

**ಡಾ. ಕೆ. ಆರ್. ಜಲಜಾ, ಪ್ರಾಧ್ಯಾಪಕರು, ವಾಣಿಜ್ಯ ನಿಕಾಯದ ಡೀನರು ಹಾಗೂ ನೋಡಲ್ ಅಧಿಕಾರಿ SCOUT ರವರಿಗೆ ಪ್ರಯಾಣ ದಿವಸಗಳ ಸೇರಿ ದಿನಾಂಕ: 08.11.2024 ರಿಂದ 24.11.2024 ರವರೆಗೆ Scholars for Outstanding Undergraduate Training Programme (SCOUT) ಕಾರ್ಯಕ್ರಮದ ಅಡಿಯಲ್ಲಿ ಯು.ಕೆ. ದೇಶದ ಯುನಿವರ್ಸಿಟಿ ಆಫ್ ಈಸ್ಟ್ ಲಂಡನ್ ವಿಶ್ವವಿದ್ಯಾನಿಲಯಕ್ಕೆ ಹೋಗಲು OOD ನೀಡಿದ ಕ್ರಮದ ಅನುಸಮರ್ಥನೆ ಮಾಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 7**

ವಿಷಯ: ಡಾ. ತಾಂಡವಗೌಡ ಟಿ. ಎನ್, ಸಹಾಯಕ ಪ್ರಾಧ್ಯಾಪಕರು, ಆಂಗ್ಲ ವಿಭಾಗ, ಅವರು ಲಂಡನ್‌ನಲ್ಲಿ ನಡೆಯಲ್ಲಿರುವ Scholars for Outstanding Undergraduate Training Programme (SCOUT) ಕಾರ್ಯಕ್ರಮದಲ್ಲಿ 2024 ನವೆಂಬರ್ 09–22 ರವರೆಗೆ ಭಾಗವಹಿಸಲು ಅನುಮತಿಸುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 25 ಯುಬಿವಿ 2024, ಬೆಂಗಳೂರು ದಿನಾಂಕ: 05.10.2024.
2. ಕರ್ನಾಟಕ ರಾಜ್ಯದ ಉನ್ನತ ಶಿಕ್ಷಣ ಪರಿಷತ್ ಪತ್ರ ಸಂಖ್ಯೆ: KSHEC/14/ SCOUT/2024-25/764 ದಿನಾಂಕ: 23.10.2024.
3. ವಿಶ್ವವಿದ್ಯಾನಿಲಯದ ಕಛೇರಿ ಆದೇಶದ ಸಂಖ್ಯೆ: BCU/EST/OOD/ SCOUT / UK/ 2024-25 dated: 04.11.2024.

***<u>ಪರಾಮರ್ಶಕ ಟಿಪ್ಪಣಿ:</u>***

ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು ಮತ್ತು ಬ್ರಿಟಿಷ್ ಕೌನ್ಸಿಲ್ ಸಹಯೋಗದೊಂದಿಗೆ ಮಾಡಿಕೊಂಡಿರುವ MoU ನೊಂದಿಗೆ ರಾಜ್ಯದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೊಂದಿಗೆ, SCOUT ಕಾರ್ಯಕ್ರಮವನ್ನು ದಿನಾಂಕ: 09.11.2024 ರಿಂದ 22.11.2024 ರವರೆಗೆ ಲಂಡನ್‌ನಲ್ಲಿ ಆಯೋಜಿಸಲಾಗಿದೆ. ಸದರಿ ಕಾರ್ಯಕ್ರಮದಲ್ಲಿ ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರು ಹಾಗೂ ಉನ್ನತ ಶಿಕ್ಷಣ ಪರಿಷತ್ತಿನ ಆಡಳಿತಾಧಿಕಾರಿಗಳಾದ ಡಾ.ಟಿ.ಎನ್. ತಾಂಡವಗೌಡ ಅವರನ್ನು ತಂಡದೊಂದಿಗೆ ಭಾಗವಹಿಸಲು ಉಲ್ಲೇಖಿತ (1)

ರಲ್ಲಿ ಸರ್ಕಾರವು ಅನುಮತಿ ನೀಡಿ ಆದೇಶಿಸಲಾಗಿದೆಯೆಂದು (ಅನುಬಂಧ-1) ತಿಳಿಸಿ, ವಿಶ್ವವಿದ್ಯಾನಿಲಯದ ಸಹಾಯಕ ಪ್ರಾಧ್ಯಾಪಕರು ಡಾ.ಟಿ.ಎನ್. ತಾಂಡವಗೌಡ ಅವರಿಗೆ ಲಂಡನ್‌ನಲ್ಲಿ ನಡೆಯಲಿರುವ Scholars for Outstanding Undergraduate Training Programme (SCOUT) ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿರುವ ಹಿನ್ನೆಲೆಯಲ್ಲಿ ದಿನಾಂಕ: 09.11.2024 ರಿಂದ 22.11.2024 ರವರೆಗೆ ಮತ್ತು ಪ್ರಯಾಣ ದಿನಗಳನ್ನು ಅನ್ಯಕಾರ್ಯ ನಿಮಿತ್ತ ಎಂದು ಪರಿಗಣಿಸುವಂತೆ ಉಲ್ಲೇಖಿತ (2) ರಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಕಾರ್ಯನಿರ್ವಾಹಕ ನಿರ್ದೇಶಕರು ಕೋರಿರುತ್ತಾರೆ.

ಯುಜಿಸಿ ನಿಯಮಾವಳಿ 2018, 8.1 i(a) ಪ್ರಕಾರ ಒಂದು ಶೈಕ್ಷಣಿಕ ವರ್ಷದಲ್ಲಿ 30 ದಿನಗಳಿಗೆ duty leave ಮಂಜೂರು ಮಾಡಲು ಅವಕಾಶವಿದ್ದು, ಈಗಾಗಲೇ 12 ದಿನಗಳ ಅನ್ಯಕಾರ್ಯ ನಿಮಿತ್ತ (OOD) ವನ್ನು ಉಪಯೋಗಿಸಿಕೊಂಡಿದ್ದು, ಬಾಕಿ 18 ದಿನಗಳು ಉಳಿದಿರುತ್ತವೆ. ಡಾ. ತಾಂಡವಗೌಡ ಟಿ. ಎನ್, ಸಹಾಯಕ ಪ್ರಾಧ್ಯಾಪಕರಿಗೆ ದಿನಾಂಕ: 09.11.2024 ರಿಂದ 22.11.2024 ರವರೆಗೆ ಲಂಡನ್‌ನಲ್ಲಿ ನಡೆಯುವ SCOUT ಕಾರ್ಯಕ್ರಮದಲ್ಲಿ ಭಾಗವಹಿಸಲು ವಿಶ್ವವಿದ್ಯಾನಿಲಯದಿಂದ ಯಾವುದೇ ಹಣಕಾಸು ಭಾಧ್ಯತೆ ಇಲ್ಲದೆ ಪ್ರಯಾಣದ ದಿನಗಳನ್ನು ಸೇರಿ OOD ಮೇಲೆ ತೆರಳಲು ಉಲ್ಲೇಖ (3)ರಲ್ಲಿ ಅನುಮತಿ ನೀಡಲಾಗಿದೆ. ಸದರಿ ವಿಷಯವನ್ನು ಸಿಂಡಿಕೇಟ್‌ನ ಘಟನೋತ್ತರ ಅನುಮೋದನೆಗಾಗಿ ಮಂಡಿಸಿದೆ.

***ಸಿಂಡಿಕೇಟ್ ತೀರ್ಮಾನ:***

**ಡಾ. ತಾಂಡವ ಗೌಡ ಟಿ. ಎನ್ ರವರನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ವತಿಯಿಂದ ದಿನಾಂಕ. 9.11.2024 ರಿಂದ 22.11.2024ರ ವರಿಗೆ (ಪ್ರಯಾಣ ದಿವಸಗಳನ್ನು ಹೊರತುಪಡಿಸಿ) SCOUT ಕಾರ್ಯಕ್ರಮದ ಅಡಿಯಲ್ಲಿ ಯಾವುದೇ ಹಣಕಾಸಿನ ಬಾಧ್ಯತೆ ಇಲ್ಲದೆ OOD ಮೇಲೆ ತೆರಳಲು ಅನುಮತಿ ನೀಡಿರುವ ಕ್ರಮಕ್ಕೆ ಅನುಸಮರ್ಥನೆ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

**ವಿಷಯ ಸಂಖ್ಯೆ: 8**

ವಿಷಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ Examination Process Management ಮತ್ತು E-Governance in Examination Management ಸೇವೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ M/s Logisys ಮತ್ತು M/s Uniclare ಸಂಸ್ಥೆಗಳ ಸೇವೆಯನ್ನು ಮತ್ತೊಂದು ಅವಧಿಗೆ ಮುಂದುವರೆಸುವ ಕುರಿತು

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ:ಇಡಿ 09 ಇಜಿಒವಿ 2023, ದಿನಾಂಕ: 19.10.2024

***ಪರಾಮರ್ಶಕ ಟಿಪ್ಪಣಿ:***

ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ Examination Process Management ಮತ್ತು E-Governance in Examination Management ಸೇವೆಗಳನ್ನು ಹೊರಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುತ್ತಿರುವ M/s Logisys ಮತ್ತು M/s Uniclare ಸಂಸ್ಥೆಗಳ ಸೇವೆಯನ್ನು ದಿನಾಂಕ: 27.09.2023 ಮತ್ತು ದಿನಾಂಕ 12.03.2024 ರ ಸಿಂಡಿಕೇಟ್ ಸಭೆಯ ತೀರ್ಮಾನದಂತೆ ಒಂದು ವರ್ಷದ ಅವಧಿಗೆ ನವೆಂಬರ್-2023 ರಿಂದ ಅಕ್ಟೋಬರ್-2024 ರವರೆಗೆ ಮುಂದುವರೆಸಲು ಕಾರ್ಯಾದೇಶವನ್ನು ನೀಡಲಾಗಿತ್ತು.

ದಿನಾಂಕ:19.10.2024 ರ ಸರ್ಕಾರದ ಆದೇಶದಂತೆ UUCMS ತಂತ್ರಾಂಶ ಬಳಕೆಗಿಂತ ಮೊದಲು ನೋಂದಣಿಯಾಗಿ ವಿವಿಧ ವರ್ಷಗಳಲ್ಲಿ ಅನುತ್ತೀರ್ಣಗೊಂಡಿರುವ ವಿದ್ಯಾರ್ಥಿಗಳ ಪರೀಕ್ಷೆಗಳನ್ನು UUCMS ತಂತ್ರಾಂಶದಲ್ಲಿ ಮುಂದುವರೆಸುವ ಭಾಗವು ಅಭಿವೃದ್ಧಿಯ ಹಂತದಲ್ಲಿರುವುದರಿಂದ, ಹಳೆಯ ತಂತ್ರಾಂಶದಲ್ಲಿ ನೋಂದಣಿಯಾಗಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ಈ ಹಿಂದಿನಂತೆ Non-NEP ಅಡಿಯಲ್ಲಿ ಪರೀಕ್ಷೆಗಳನ್ನು ಮುಂದುವರೆಸಿಕೊಂಡು ಹೋಗಲು ಸೂಚಿಸಿರುತ್ತಾರೆ. ಆದುದರಿಂದ M/s Logisys ಮತ್ತು M/s Uniclare ಸಂಸ್ಥೆಗಳ ಸೇವಾ ಅವಧಿಯು ಈಗಾಗಲೇ ಮುಗಿದಿರುವುದರಿಂದ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತೊಂದು ವರ್ಷದ ಅವಧಿಯವರೆಗೆ ಮುಂದುವರೆಸುವ ಕುರಿತು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ.

**ವಿವರಣೆ:**

ಕುಲಸಚಿವರು (ಮೌಲ್ಯಮಾಪನ) ರವರು ಪ್ರಸ್ತಾವನೆಯ ವಿವರಗಳನ್ನು ಸಭೆಗೆ ನೀಡಿದರು. ಎನ್.ಇ.ಪಿ. ಪೂರ್ವದ ವ್ಯಾಸಂಗ ಕ್ರಮದ ಪರೀಕ್ಷಾ ಚಟುವಟಿಕೆಗಳ ಸಲುವಾಗಿ M/s Logisys ಮತ್ತು M/s Uniclare ಸಂಸ್ಥೆಗಳಿಂದ Examination Process Management ಮತ್ತು E-Governance in Examination Management ಹೊರಗುತ್ತಿಗೆ ಸೇವೆ ಪಡೆಯಲಾಗುತ್ತಿದೆ. 2021-22ರ ಎನ್.ಇ.ಪಿ ಹಾಗೂ ನಂತರದಲ್ಲಿ 2024-25ರಿಂದ ಎಸ್.ಇ.ಪಿ. ವ್ಯಾಸಂಗ ಕ್ರಮ ಜಾರಿಗೊಳಿಸಿದ ನಂತರ ರಾಜ್ಯ ಸರ್ಕಾರ ಸಿದ್ಧಪಡಿಸಿದ ಯು.ಯು.ಸಿ.ಎಂ.ಎಸ್. ಪೋರ್ಟಲ್‌ನಲ್ಲಿ ವಿಶ್ವವಿದ್ಯಾನಿಲಯದ ಸಂಯೋಜನೆ ಪ್ರವೇಶ, ಪರೀಕ್ಷೆ ಮುಂತಾದ ಚಟುವಟಿಕೆಗಳನ್ನು ನಿರ್ವಹಿಸಲಾಗುತ್ತಿದೆ. ಎನ್.ಇ.ಪಿ ಪೂರ್ವದ ವ್ಯಾಸಂಗ ಕ್ರಮದಡಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಲ್ಲಿ ಇನ್ನೂ ಸುಮಾರು 500 ವಿದ್ಯಾರ್ಥಿಗಳ ಪರೀಕ್ಷೆಗಳಲ್ಲಿ ತೇರ್ಗಡೆಯಾಗದೇ ಉಳಿದು ಕೊಂಡಿರುತ್ತಾರೆ. ಎನ್.ಇ.ಪಿ ಪೂರ್ವದ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಪರೀಕ್ಷಾ ಕೆಲಸ ಕಾರ್ಯಗಳನ್ನು M/s Logisys ಮತ್ತು M/s Uniclare ಸಂಸ್ಥೆಗಳು ನಿರ್ವಹಿಸಿರುವುದರಿಂದ, ತೇರ್ಗಡೆಯಾಗದೆ ಉಳಿದುಕೊಂಡಿರುವ ವಿದ್ಯಾರ್ಥಿಗಳಿಗೆ ಸಂಬಂಧಿಸಿರುವ ಪರೀಕ್ಷಾ ಚಟುವಟಿಕೆಗಳನ್ನು ನಿರ್ವಹಿಸಲು ಒಂದು ವರ್ಷದ ಅವಧಿಗೆ ಅವರ ಸೇವೆಯ ಮುಂದುವರೆಸಲು ಕೋರಲಾಗಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಹೆಚ್. ಕೃಷ್ಣರಾಮ್ ರವರು ಈ ಸಂಸ್ಥೆಗಳ ಕುರಿತು ಬೇರೆ ವಿಶ್ವವಿದ್ಯಾನಿಲಯದಲ್ಲಿ ವಿಚಾರಣೆಗಳು ಜರುಗಿದ್ದು, ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದತ್ತಾಂಶಗಳನ್ನು (Data) ವಿಶ್ವವಿದ್ಯಾನಿಲಯದ ಸುಪರ್ದಿಗೆ ತೆಗೆದುಕೊಂಡು ಈ ಕೆಲಸವನ್ನು ಬೇರೆ ಸಂಸ್ಥೆಗೆ ವಹಿಸಬೇಕೆಂದು ಪ್ರಸ್ತಾಪಿಸಿದರು. ವಿದ್ಯಾರ್ಥಿಗಳಿಗೆ ಸಂಬಂಧಿಸಿದ ದತ್ತಾಂಶಗಳು ಸಂಸ್ಥೆಯ ಅಧೀನದಲ್ಲಿದ್ದು, ಅವುಗಳನ್ನು Cloudನಲ್ಲಿ ಸಂಗ್ರಹಿಸಲಾಗಿದೆ. ಇದರಿಂದಾಗಿ ವಿದ್ಯಾರ್ಥಿಗಳ ದತ್ತಾಂಶಗಳ ದುರುಪಯೋಗ ಆಗುವ ಸಾಧ್ಯತೆ ಇದೆ. ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದ ವಿದ್ಯಾರ್ಥಿಗಳ ದತ್ತಾಂಶ (Data) ಗಳನ್ನು ಸುರಕ್ಷಿತವಾಗಿ ವಿಶ್ವವಿದ್ಯಾನಿಲಯದ ಸರ್ವ್‌ರನಲ್ಲಿರಬೇಕು ಎಂದು ಹೇಳಿದರು.

ಕುಲಸಚಿವರ (ಮೌ) ರವರು ಪ್ರತಿಕ್ರಿಯಿಸಿ, ನಮ್ಮ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದಂತೆ ಈ ಸಂಸ್ಥೆಗಳ ವಿರುದ್ಧ ಯಾವುದೇ ವಿಚಾರಣೆ ಜರುಗಿರುವುದಿಲ್ಲವೆಂದು ತಿಳಿಸಿ ವಿದ್ಯಾರ್ಥಿಗಳ, ದತ್ತಾಂಶಗಳು ಸುರಕ್ಷಿತವಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಶ್ರೀ ಎಂ. ವಿ. ರಂಗಪ್ಪನವರು, ಯು.ಯು.ಸಿ.ಎಂ.ಎಸ್ ಸಂಬಂಧಿಸಿದಂತೆ ವಿದ್ಯಾರ್ಥಿಗಳು ವಿಶ್ವವಿದ್ಯಾನಿಲಯಕ್ಕೆ ಭೇಟಿ ನೀಡುತ್ತಿದ್ದು, ಅವರ ಸಮಸ್ಯೆಗಳನ್ನು ಆಲಿಸಲು ಹಾಗೂ ಅಗತ್ಯ ಮಾಹಿತಿ ನೀಡಲು ವಿಚಾರಣಾ ಕೌಂಟರ್ ಪ್ರಾರಂಭಿಸಬೇಕು ಎಂದು ಸಲಹೆ ನೀಡಿದರು. ಇದಲ್ಲದೆ ಯು.ಯು.ಸಿ.ಎಂ.ಎಸ್ ನಲ್ಲಿ ವಿಶ್ವವಿದ್ಯಾನಿಲಯದ ಪೋರ್ಟಲ್ ಸುರಕ್ಷತೆ ಕುರಿತು ಗಮನ ಹರಿಸಬೇಕೆಂದು ತಿಳಿಸಿದರು. ಇದಕ್ಕೆ ಮಾನ್ಯ ಕುಲಪತಿಗಳು ಪ್ರತಿಕ್ರಿಯಿಸಿ, ಯು.ಯು.ಸಿ.ಎಂ.ಎಸ್ ಹಾಗೂ ತತ್ಸಂಬಂಧದ ವಿದ್ಯಾರ್ಥಿಗಳ ಸಮಸ್ಯೆ ಆಲಿಸಲು ವಿಚಾರಣಾ ಕೌಂಟರ್ ಹಾಗೂ ಯು.ಯು.ಸಿ.ಎಂ.ಎಸ್ ನಿರ್ವಹಣೆಗೆ ತಾಂತ್ರಿಕ ಸಿಬ್ಬಂದಿಗಳ ಅಗತ್ಯವಿದೆ. ಸರ್ಕಾರಕ್ಕೆ 55 ಹುದ್ದೆಗಳನ್ನು ಮಂಜೂರು ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಸದಸ್ಯರಾದ ಸಮರ್ಥ ಮುನಿರಾಜುರವರು ಕಳೆದ ವರ್ಷ ಈ ಸಂಸ್ಥೆಗಳ ಸೇವೆ ಮುಂದುವರೆಸಲು ರಚಿಸಲಾದ ಸಮಿತಿಯಲ್ಲಿ ತಾವು ಸದಸ್ಯರಾಗಿದ್ದು, ಆ ಸಂದರ್ಭದಲ್ಲಿ ಕೊನೆಯ ಅವಕಾಶವೆಂದು ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಸೇವೆ ಮುಂದುವರೆಸಲು ಅವಕಾಶ ನೀಡಲಾಗಿತ್ತು. ಕೇವಲ 500 ವಿದ್ಯಾರ್ಥಿಗಳ ಸಲುವಾಗಿ ಹೊಸ ಸಂಸ್ಥೆಗೆ ನೀಡುವುದು ಹಣಕಾಸಿನ ದೃಷ್ಟಿಯಿಂದ ಸಮರ್ಥನೀಯವಲ್ಲವೆಂದು ತಿಳಿಸಿ, ಒಪ್ಪಿತವಾಗಿರುವ ದರಗಳ ಆಧಾರದ ಮೇಲೆ ಉಳಿದ 500 ವಿದ್ಯಾರ್ಥಿಗಳಿಗೆ ಸದರಿ ಸಂಸ್ಥೆಗಳಿಂದ ಹೊರಗುತ್ತಿಗೆ ಸೇವೆ ಪಡೆದುಬಹುದೆಂದು ತಿಳಿಸಿದರು. ಶ್ರೀ ಎಂ.ವಿ.ರಂಗಪ್ಪನವರು ಸಹ, ಇದಕ್ಕೆ ಸಹಮತ ವ್ಯಕ್ತಪಡಿಸಿದರು.

ಮಾನ್ಯ ಸದಸ್ಯರಾದ ಡಾ. ಹೆಚ್. ಕೃಷ್ಣರಾಮ್, ಶ್ರೀ ಸಮರ್ಥ ಹಾಗೂ ಎಂ. ವಿ. ರಂಗಪ್ಪನವರು ಮುನಿರಾಜು ಎಲ್ಲ ವರ್ಷಗಳ ವಿದ್ಯಾರ್ಥಿಗಳ ದತ್ತಾಂಶಗಳನ್ನು ಕೂಡಲೇ ವಿಶ್ವವಿದ್ಯಾನಿಲಯ ಪಡೆಯಬೇಕೆಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ವಿ. ಶಿವಕುಮಾರ್ ರವರು ಸದಸ್ಯರ ಭಾವನೆಗಳಿಗೆ ಸ್ಪಂದಿಸಿ, ಕೂಡಲೇ ದತ್ತಾಂಶಗಳನ್ನು ವಿಶ್ವವಿದ್ಯಾನಿಲಯದ ಸುಪರ್ದಿಗೆ ಪಡೆದು ಪ್ರಸ್ತಾಪಿಸಿದಂತೆ 500 ವಿದ್ಯಾರ್ಥಿಗಳಿಗೆ ಪ್ರಸ್ತುತ ಸಂಸ್ಥೆಗಳ ಹೊರಗುತ್ತಿಗೆ ಸೇವೆ ಮುಂದುವರೆಸಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕುಲಪತಿಗಳು ವಿವರಣೆ ನೀಡಿ ಎನ್.ಇ.ಪಿ., ಹಾಗೂ ಎಸ್.ಇ.ಪಿ ಅಡಿಯಲ್ಲಿರುವ ವ್ಯಾಸಂಗ ಕ್ರಮಗಳಿಗೆ ಸಂಬಂಧಿಸಿದ, ವಿಶ್ವವಿದ್ಯಾನಿಲಯದ ಎಲ್ಲ ಚಟುವಟಿಕೆಗಳಿಗೆ ಈಗಾಗಲೇ ಸರ್ಕಾರ ರೂಪಿಸಿರುವ ಯು.ಯು.ಸಿ.ಎಂ.ಎಸ್. ತತ್ರಾಂಶದ ಬಳಿಕೆ ಮಾಡಿಕೊಳ್ಳುತ್ತಿದ್ದು, ಅದರ ಆಧಾರದ ಮೇಲೆ ಶೈಕ್ಷಣಿಕ ಚಟುವಟಿಕೆ, ಸಂಯೋಜನೆ, ಪರೀಕ್ಷೆಗಳಿಗೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ನುರಿತ ತಾಂತ್ರಿಕ ಸಿಬ್ಬಂದಿಗಳ ಕೊರತೆ ಇದ್ದು, ಲಭ್ಯವಿರುವ ಸಿಬ್ಬಂದಿಗಳು ಈ ಕೆಲಸಗಳನ್ನು ನಿರ್ವಹಿಸುತ್ತಿದ್ದಾರೆ. ಎನ್.ಇ.ಪಿ. ಪೂರ್ವದ ವ್ಯಾಸಂಗ ಕ್ರಮದ ಪ್ರಕಾರ ಉಳಿದು ಕೊಂಡಿರುವ ಸುಮಾರು 500 ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಪರೀಕ್ಷಾ ಚಟುವಟಿಕೆಗಳನ್ನು ಈಗಾಗಲೇ ಒಪ್ಪಿತವಾದ ದರಗಳ ಆಧಾರದ ಮೇಲೆ M/s Logisys ಮತ್ತು M/s Uniclare ಸಂಸ್ಥೆಗಳ ಮುಖಾಂತರ ನಿರ್ವಹಿಸಿಕೊಳ್ಳಲು ಸಭೆಯ ಅನುಮೋದನೆಗಾಗಿ ವಿಷಯ ಮಂಡಿಸಿದೆ ಎಂದು ತಿಳಿಸಿದರು.

***ಸಿಂಡಿಕೇಟ್ ತೀರ್ಮಾನ:***

**ಕುಲಸಚಿವರು (ಮೌಲ್ಯಮಾಪನ) ರವರು ಪ್ರಸ್ತಾಪಿಸಿದಂತೆ ಎನ್.ಇ.ಪಿ. ಪೂರ್ವದ ವ್ಯಾಸಂಗ ಕ್ರಮದಲ್ಲಿ ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳ ಪರೀಕ್ಷಾ ಕೆಲಸಗಳನ್ನು M/s Logisys ಮತ್ತು M/s Uniclare ಸಂಸ್ಥೆಗಳಿಗೆ ಹೊರಗುತ್ತಿಗೆ ಸೇವೆಯನ್ನು ಈಗಾಗಲೇ ಒಪ್ಪಿತವಾಗಿರುವ ದರಗಳ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಸೇವೆಯನ್ನು ಮುಂದುವರೆಸಲು ಸಿಂಡಿಕೇಟ್ ಸಭೆ ಅನುಮೋದನೆ ನೀಡಲು ತೀರ್ಮಾನಿಸಿತು.**

**ವಿಷಯ ಸಂಖ್ಯೆ: 9**

ವಿಷಯ: 2025-26ನೇ ಶೈಕ್ಷಣಿಕ ಸಾಲಿಗಾಗಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಹಾಗೂ ಹೊಸದಾಗಿ ಕಾಲೇಜನ್ನು ಪ್ರಾರಂಭಿಸಲು ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಸಂಸ್ಥೆಗಳ ಪರಿಶೀಲನೆಗಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಕುರಿತು

***ಪರಾಮರ್ಶಕ ಟಿಪ್ಪಣಿ:***

ಸರ್ಕಾರದ ಆದೇಶ ಸಂಖ್ಯೆ ದಿನಾಂಕ: 04.10.2024ರಲ್ಲಿ 2025–26ನೇ ಶೈಕ್ಷಣಿಕ ಸಾಲಿನ ಸಂಯೋಜನಾ ವೇಳಾ ಪಟ್ಟಿಯನ್ನು ಜಾರಿಗೊಳಿಸಿ ಆದೇಶಿಸಿರುತ್ತಾರೆ. ಈ ಸಂಯೋಜನಾ ವೇಳಾಪಟ್ಟಿಯ ಪ್ರಕಾರ ವಿಶ್ವವಿದ್ಯಾನಿಲಯಗಳು 2025–26ನೇ ಶೈಕ್ಷಣಿಕ ಸಾಲಿಗಾಗಿ ಅಸ್ತಿತ್ವದಲ್ಲಿರುವ ಕಾಲೇಜುಗಳ ಹಾಗೂ ಹೊಸದಾಗಿ ಕಾಲೇಜನ್ನು ಪ್ರಾರಂಭಿಸಲು ಸಂಯೋಜನೆಗೆ ಅರ್ಜಿ ಸಲ್ಲಿಸಿರುವ ಸಂಸ್ಥೆಗಳ ಪರಿಶೀಲನೆಗಾಗಿ ಸ್ಥಳೀಯ ವಿಚಾರಣಾ ಸಮಿತಿಗಳನ್ನು ದಿನಾಂಕ: 11.12.2024 ರೊಳಗೆ ರಚಿಸಲು ಸೂಚಿಸಿರುತ್ತಾರೆ. 2025–26ನೇ ಶೈಕ್ಷಣಿಕ ಸಾಲಿಗೆ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವ 13 ವಿಧಾನ ಸಭಾ ಕ್ಷೇತ್ರಗಳಾದ ಬಸವನಗುಡಿ, ಬಿ.ಟಿ.ಎಂ ಲೇಔಟ್, ಬ್ಯಾಟರಾಯನಪುರ, ಚಿಕ್ಕಪೇಟೆ, ಗಾಂಧೀನಗರ, ಚಾಮರಾಜಪೇಟೆ, ಹೆಬ್ಬಾಳ, ಜಯನಗರ, ಮಲ್ಲೇಶ್ವರಂ, ರಾಜಾಜಿನಗರ, ಶಾಂತಿನಗರ, ಶಿವಾಜಿನಗರ, ಯಲಹಂಕ ಕ್ಷೇತ್ರಗಳ ಸಂಯೋಜಿತ ಕಾಲೇಜುಗಳ ಹಾಗೂ ಅರ್ಹ ಶಿಕ್ಷಣ ಸಂಸ್ಥೆಗಳಿಂದ ವಿವಿಧ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳು ಹಾಗೂ NCTE ಯಿಂದ ಅನುಮೋದನೆ ಪಡೆದ B.Ed/B.PEd/M.Ed/M.PEd ಕೋರ್ಸುಗಳಿಗೆ ವಾರ್ಷಿಕ ಸಂಯೋಜನೆಗೆ ಸಂಬಂಧಿಸಿದಂತೆ:–

1) ಅಸ್ತಿತ್ವದಲ್ಲಿರುವ ಕಾಲೇಜುಗಳಿಗೆ ಸಂಯೋಜನೆ ನವೀಕರಣ
2) ಹೊಸ ಕೋರ್ಸುಗಳು/ ಹೊಸ ವಿಷಯಗಳನ್ನು ಪ್ರಾರಂಭಿಸಲು
3) ಪ್ರವೇಶ ಸಂಖ್ಯೆಯನ್ನು ಹೆಚ್ಚಿಸುವುದು/ಕಡಿಮೆಗೊಳಿಸುವುದು
4) ಕಾಲೇಜಿನ/ಸಂಸ್ಥೆಯ ಹೆಸರು ಮತ್ತು ವಿಳಾಸ ಬದಲಾವಣೆ
5) ಅಸ್ತಿತ್ವದಲ್ಲಿರುವ ಕಾಲೇಜುಗಳಲ್ಲಿ ಸ್ನಾತಕೋತ್ತರ ಕೋರ್ಸುಗಳ ಸಂಯೋಜನೆ ನವೀಕರಣ
6) ಹೊಸ ಕಾಲೇಜನ್ನು ಪ್ರಾರಂಭಿಸಲು
7) ಹಾಲಿ ಇರುವ ಕಾಲೇಜುಗಳಲ್ಲಿ ಹೊಸದಾಗಿ ಸ್ನಾತಕೋತ್ತರ ಕೋರ್ಸುಗಳನ್ನು ಪ್ರಾರಂಭಿಸಲು
8) ಹಾಲಿ ಶಾಶ್ವತ ಸಂಯೋಜನೆ ಹೊಂದಿರುವ ಕಾಲೇಜುಗಳ ನವೀಕರಣ ಹೊಸದಾಗಿ ಶಾಶ್ವತ ಸಂಯೋಜನೆ ನೀಡುವುದು
9) ಕೋರಿರುವ ಕೋರ್ಸು/ ಕಾಲೇಜುಗಳಿಗೆ ಹೊಸ ಶಾಶ್ವತ ಸಂಯೋಜನೆ ನೀಡುವ ಕುರಿತಂತೆ

ಮೇಲಿನ ಅಂಶಗಳ ಹಿನ್ನಲೆಯಲ್ಲಿ 2025–26ನೇ ಶೈಕ್ಷಣಿಕ ಸಾಲಿಗೆ ಸರ್ಕಾರದ ಆದೇಶ ಸಂಖ್ಯೆ:ಇಡಿ 212ಯುಎನ್ಇ 2024 ದಿನಾಂಕ 04.10.2024ರ ಅನ್ವಯ ಉನ್ನತ ಶಿಕ್ಷಣ ಇಲಾಖೆಯು ಅಭಿವೃದ್ಧಿಪಡಿಸಿರುವ UUCMS Portal ಮುಖಾಂತರವೇ Online ಸಂಯೋಜನಾ ತಂತ್ರಾಂಶದ ಮೂಲಕ ಅರ್ಜಿಗಳನ್ನು ಆಹ್ವಾನಿಸಬೇಕಾಗಿರುತ್ತದೆ. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪ್ರಕರಣ 59 ಉಪ ಪ್ರಕರಣ (2)ರನ್ವಯ ಸಂಯೋಜನಾ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಕಾಲೇಜುಗಳಿಂದ ಹಾಗೂ ಹೊಸ ಕಾಲೇಜಿಗೆ ಅರ್ಜಿ ಸಲ್ಲಿಸುವ ಸಂಸ್ಥೆಗಳಿಂದ ಅರ್ಜಿಗಳನ್ನು ಆಹ್ವಾನಿಸಲು 3 ಕನ್ನಡ ಮತ್ತು 3 ಇಂಗ್ಲೀಷ್ ದಿನ ಪತ್ರಿಕೆಗಳಲ್ಲಿ ದಿನಾಂಕ:30–10–2024 ರಂದು ಪ್ರಕಟಣೆಯನ್ನು ನೀಡಲಾಗಿದೆ. ಸರ್ಕಾರ ಸಿದ್ಧಪಡಿಸಿದ UUCMS Online Portal ಮುಖಾಂತರ ವಿಶ್ವವಿದ್ಯಾನಿಲಯ ನಿಗದಿಪಡಿಸಿರುವ ಅಗತ್ಯ ಸಂಯೋಜನಾ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ದಿನಾಂಕ:21–11–2024 ಕೊನೆಯ ದಿನಾಂಕವಾಗಿರುತ್ತದೆ.(15 ಕಾರ್ಯನಿರತ ದಿನಗಳು).

ಕರ್ನಾಟಕ ಸರ್ಕಾರ ಹೊರಡಿಸಿರುವ ಸುತ್ತೋಲೆ ಸಂಖ್ಯೆ: ಇಡಿ 94ಯುಬಿವಿ 2022 ದಿನಾಂಕ:24.11.2022ರಲ್ಲಿ ಸಾಮಾಜಿಕ ಮತ್ತು ನೈಸರ್ಗಿಕ ನ್ಯಾಯದ ಪರಿಪಾಲನೆಯೊಂದಿಗೆ ಶೈಕ್ಷಣಿಕ ಹಿರಿಮೆಯನ್ನು ಸಾಧಿಸಲು ಹಾಗೂ ಶಿಕ್ಷಣ ಗುಣಮಟ್ಟವನ್ನು ವೃದ್ಧಿಸಲು ಅವಶ್ಯವಾದ ನ್ಯಾಯೋಚಿತ, ಪಾರದರ್ಶಕ ಹಾಗೂ ನಿಷ್ಪಕ್ಷಪಾತ ಸಂಯೋಜನೆ ಪ್ರಕ್ರಿಯೆಯನ್ನು ರೂಪಿಸಬೇಕಾದಲ್ಲಿ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ವಿಷಯ ಪಾರಂಗತರನ್ನು ಹಾಗೂ ಶಿಕ್ಷಣ ತಜ್ಞರನ್ನು ನೇಮಿಸುವ ಅವಶ್ಯಕತೆಯನ್ನು ಮನಗಂಡುರಾಜ್ಯದ ವಿಶ್ವವಿದ್ಯಾನಿಲಯಗಳ ಸ್ಥಳೀಯ ವಿಚಾರಣಾ ಸಮಿತಿಗಳಿಗೆ ಸಿಂಡಿಕೇಟ್ ಸದಸ್ಯರು/ಅಧ್ಯಕ್ಷರನ್ನು ನೇಮಿಸದೇ ಕೇವಲ ವಿಷಯ ಪರಿಣಿತರು/ ಶಿಕ್ಷಣತಜ್ಞರನ್ನು ನೇಮಿಸಲು ಸೂಚಿಸಿ ಸಿಂಡಿಕೇಟ್ ಸದಸ್ಯರನ್ನು ಸ್ಥಳೀಯ ಪರಿಶೀಲನಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸದಿರಲು ವಿಶ್ವವಿದ್ಯಾನಿಲಯಕ್ಕೆ ಸೂಚಿಸಲಾಗಿದೆ.

ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ 220 ಕಾಲೇಜುಗಳು ಸಂಯೋಜನೆಗೆ ಒಳಪಟ್ಟಿರುತ್ತದೆ. 2025–26ನೇ ಶೈಕ್ಷಣಿಕ ಸಾಲಿಗೆ ಸ್ವೀಕರಿಸಲಾಗುವ ಸಂಯೋಜನಾ ಅರ್ಜಿಗಳಿಗೆ ಅನುಗುಣವಾಗಿ ಅಗತ್ಯ ಸಂಖ್ಯೆಯ ಸ್ಥಳೀಯ ವಿಚಾರಣಾ ಸಮಿತಿಗಳನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ. ಈ ಸಮಿತಿಗಳು ಸಂಯೋಜಿತ ಕಾಲೇಜುಗಳಿಗೆ ಹಾಗೂ ಹೊಸ ಕಾಲೇಜಿನ ಸಂಸ್ಥೆಗಳಿಗೆ ಭೇಟಿ ನೀಡಿಅಗತ್ಯ ದಾಖಲೆಗಳನ್ನು ಹಾಗೂ ಶೈಕ್ಷಣಿಕ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ ನಿಗದಿತ ಅವಧಿಯಲ್ಲಿ ಸಂಯೋಜನಾ ವರದಿಗಳನ್ನು ಸಲ್ಲಿಸಲು ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಕುರಿತು ವಿಷಯವನ್ನು ಸಿಂಡಿಕೇಟ್ ಸಭೆಯ ಮುಂದೆ ಪರಿಶೀಲನೆ ಹಾಗೂ ತೀರ್ಮಾನಕ್ಕಾಗಿ ಮಂಡಿಸಲಾಗಿದೆ.

**ವಿವರಣೆ:**

ಸದಸ್ಯರಾದ ಡಾ. ಹೆಚ್. ಕೃಷ್ಣರಾಮ್. ಶ್ರೀ ಕೆ.ಪಿ. ಪಾಟೀಲ್ ಮತ್ತು ಶ್ರೀ ಎಂ.ವಿ. ರಂಗಪ್ಪ ನವರು ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ದಾಖಲಿಸಿರುವ ರಿಟ್ ಅರ್ಜಿ ಹಾಗೂ ಅದರ ಮೇಲೆ ನೀಡಿದ ಮಧ್ಯಂತರ ಆದೇಶ ಇನ್ನೂ ಊರ್ಜಿತದಲ್ಲಿರುವುದರಿಂದ, ಕಳೆದ ವರ್ಷ ಅನುಸರಿಸಿದ ಕ್ರಮವನ್ನು ಈ ವರ್ಷವೂ ಮುಂದುವರೆಸಬೇಕೆಂದು ತಿಳಿಸಿದರು.

ಕುಲಪತಿಗಳು ವಿವರಣೆ ನೀಡಿ, ಸರ್ಕಾರದ ಸುತ್ತೋಲೆಯಲ್ಲಿರುವ ಅಂಶವನ್ನು ಸಭೆಯ ಗಮನಕ್ಕೆ ತರಲಾಗಿದೆ. ಸಿಂಡಿಕೇಟ್ ಸದಸ್ಯರು ಸ್ಥಳೀಯ ವಿಚಾರಣಾ ಸಮಿತಿ ಸದಸ್ಯರಾಗುವುದರಿಂದ ತಾವೇ ತನಿಖೆ ಮಾಡಿ ಸಲ್ಲಿಸಿದ ವರದಿಗಳನ್ನು ಪರಿಶೀಲಿಸಿ ತೀರ್ಮಾನಿಸುವುದರಿಂದ Conflict of Interest ಆಗಬಹುದೆಂಬುದು ಸರ್ಕಾರದ ಸುತ್ತೋಲೆ ಅಂಶವಾಗಿರುತ್ತದೆ ಎಂದು ಹೇಳಿದರು.

***ಸಿಂಡಿಕೇಟ್ ತೀರ್ಮಾನ:***

**ಮಾನ್ಯ ಕರ್ನಾಟಕ ಉಚ್ಚನ್ಯಾಯಾಲಯದಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಸಂಖ್ಯೆ 5645/2023 (GM-RES) ಹಾಗೂ ಅದರಲ್ಲಿ ನೀಡಿರುವ ಮಧ್ಯಂತರ ಆದೇಶ ಇನ್ನು ಊರ್ಜಿತದಲ್ಲಿರುವುದನ್ನು ಖಚಿತಪಡಿಸಿಕೊಂಡು, ಈ ಕುರಿತು ರಾಜ್ಯ ಸರ್ಕಾರ ಹೊರಡಿಸಿಸುವ ಆದೇಶಗಳನ್ನು ಹಾಗೂ ಕರ್ನಾಟಕ ಉಚ್ಛನ್ಯಾಯಾಲಯ ಕಾಲಕಾಲಕ್ಕೆ ನೀಡುವ ತೀರ್ಪುಗಳನ್ನು ಅನುಸರಿಸಿ, 2025–26ನೇ ಸಾಲಿಗೆ ಮಹಾವಿದ್ಯಾಲಯಗಳು ಸಲ್ಲಿಸುವ ವಿವಿಧ ಪ್ರಕಾರ ಸಂಯೋಜನೆ ಅರ್ಜಿಗಳನ್ನು ವಿಂಗಡಿಸಿ, ಅದಕ್ಕನುಗುಣವಾಗಿ ಅಗತ್ಯ ಸಂಖ್ಯೆಯ ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ಸಭೆ ನಿರ್ಣಯಿಸಿತು.**

**<u>ಸಾಮಾನ್ಯ ವಿಷಯಗಳ ಚರ್ಚೆ:</u>**

1) ಪ್ರಸ್ತುತ ಹಣಕಾಸು ಸಮಿತಿಯಲ್ಲಿ ಸಿಂಡಿಕೇಟ್ ಪ್ರಾಧಿಕಾರವನ್ನು ಪ್ರತಿನಿಧಿಸುವ ಸದಸ್ಯರಾದ ಶ್ರೀ ಸಮರ್ಥ ಮುನಿರಾಜುರವರ ಅವಧಿ ದಿನಾಂಕ. 29.11.2024 ರಂದು ಮುಕ್ತಾಯವಾಗುವುದರಿಂದ, ಅವರ ಸ್ಥಾನದಲ್ಲಿ ಬೇರೊಬ್ಬರನ್ನು ನಾಮನಿರ್ದೇಶನ ಮಾಡುವ ಕುರಿತು ಮಾನ್ಯ ಕುಲಪತಿಗಳು ಸಭೆಯಲ್ಲಿ ಪ್ರಸ್ತಾಪಿಸಿದರು.

**<u>ತೀರ್ಮಾನ:</u>**

**ಹಣಕಾಸು ಸಮಿತಿ ಒಳಗೊಂಡಂತೆ ಉಳಿದ ಎಲ್ಲ ಉಪಸಮಿತಿಗಳಿಗೆ / ಸಲಹಾ ಸಮಿತಿಗಳಿಗೆ / ಮಹಾವಿದ್ಯಾಲಯಗಳ ಆಡಳಿತ ಮಂಡಳಿಗಳಿಗೆ ಸದಸ್ಯರನ್ನು ನಾಮನಿರ್ದೇಶನ ಮಾಡಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ಸಿಂಡಿಕೇಟ್ ಸಭೆ ತೀರ್ಮಾನಿಸಿತು.**

ಕುಲಸಚಿವರು (ಮೌಲ್ಯಮಾಪನ) ರವರಿಂದ ವಂದನಾರ್ಪಣೆ ಹಾಗೂ ರಾಷ್ಟ್ರಗೀತೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಹಿ/-
ಕುಲಸಚಿವರು
ಸದಸ್ಯಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು
ಸಭಾಧ್ಯಕ್ಷರು

ಕುಲಸಚಿವರು
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
ಬೆಂಗಳೂರು